Members' Representations

Sri AZEEZ SAIT (Narasbimharaja).—Sir, the business of the House is going on in a wonderful way. You called the Short Notice Question of Smt. Fernandes. Because the Minister was not here you passed on to the next item *i.e.*, Call Attention notices. Then Sri Gangadhar was called and now you are passing on to the next point. What is this?

Mr. DEPUTY SPEAKER.—I follow the Agenda.

Sri AZEEZ SAIT.—The Agenda is highly irregular.

Sri DIGAMBARA RAO B. KALMANKAR (Aland).—On a point of order Sir. After questions are over, Privilege Motion must be taken up. I have given notice of a privilege motion on 13-4-1968 under rules 177 and 178. That must be taken up first before any other business is taken up.

Mr. DEPUTY SPEAKER.—I know it. It will be taken up.

Sri H. SIDDAVEERAPPA (Harihar).—Sir, you may kindly now switch over to that subject. We have already spent two hours today. There are two all important notices of privilege. I request you take up the motion of Sri K. H. Patil.

Sri AZEEZ SAIT.—Before any other subject is taken up I must be given a chance. Immediately after question hour I have a right to raise my point.

Mr. DEPUTY SPEAKER.—I will finish the work first and then give the member a chance. Now presentation of the Public Accounts Committee Report.

THIRD REPORT OF THE PUBLIC ACCOUNTS COMMITTEE REPORT 1964-65 AND 1965-66 AND AUDIT REPORT FOR 1965 AND 1966.

(*Presentation*)

Sri S. D. KOTHAVALE (Sankeswar).—I present the Third Report of the Committee on Public Accounts on the Appropriation Accounts 1964-65, Finance Accounts 1964-65 and the Audit Report 1966 and the Appropriation Accounts 1965-66, Finance Accounts 1965-66 and the Audit Report on the Accounts 1965-66 relating to Agriculture and Forest Departments Development, Housing, Panchayat Raj and Co-operation Departments and Health and Municipal Administration Departments.

Mr. DEPUTY SPEAKER.—The Report is presented

FIRST REPORT OF THE COMMITTEE ON GOVERNMENT ASSURANCES.

(Presentation)

Sri R. NAGAN GOWDA (Hospet).—I present the First Report of the Committee on Government Assurances.

Mr. DEPUTY SPEAKER.—The Report is presented.

Now the House will adjourn for half-an-hour.

The House rose at Thirty-five Minutes past Ten of the Clock to re-assemble at Eleven of the Clock.

The House re-assembled at Eleven of the Clock.

[MR. DEPUTY SPEAKER in the Chair]

Member's Representation

Sri RAJA PID NAIK.—Sir, I would like to have some information from the Chair. Today being the last day and we are dispersing, myself and the House are all anxious to know about the health of the Hon. Speaker.

Mr. DEPUTY SPEAKER.—He is progressing ; he is all-right.

Sri AZIZ SAIT.—Sir, our prayer for his early recovery may kindly be conveyed to the Speaker.

Now, I want to clarify some of the remarks made by me during the debate about the wealth of the Ministers. Hon. Chief Minister has replied that I have taken a number of times permission to meet him and furnish a statement but I have evaded. In that context, I have also received a letter from the Chief Minister two days back. I am reading my reply to that. I will pass on the information regarding the Minister's accumulated wealth to you and it may be sent to the Chief Minister through you and a copy of it may be kept in the Legislature Library. My letter is as follows :—

"Dear Mr. Nijalingappa,

I have received your letter No. CMI 914/68 dated 13th April 1968. Reading your letter which is carefully worded leaves the impression that you consider that I am evading a meeting with you and that you almost feel that the statements made by me are baseless.

I may categorically tell you that I have no reason to evade meeting you, though I have serious misgivings whether anything much will come out of my disclosing the details to you. However, I had tried to meet you by even coming to your residence on a couple of times. You were not available as you were said to be away in connection with the duties attached to your other national political office.

I spell out here below certain details and hope that you will pursue the matter and let me know theout come of your action.

In conclusion I may say that more details may be forthcoming if a judicial enquiry is set up. Indeed, that is the only proper way to deal with cases of this kind. Thank you."

Now, allegations against the Minister I have not disclosed and they are kept confident for the Chief Minister to make enquiry about it. All these allegations are in this letter. I am passing on this to the Chair. The Chair may kindly pass it on to the Chief Minister and a copy of the same may be kept in the Legislative Library Sir.

Mr. DEPUTY SPEAKER.—I will take up Sri K. H. Patil's motion. I will hear the Chief Minister and then come to conclusion as to whether it is in order.

STATEMENT OF THE CHIEF MINISTER ON THE NOTICE OF BREACH OF PRIVILEGE BY Sri K. H. PATIL

Sri S. NIJALINGAPPA (Chief Minister).—Sir, this is a very strange request from a member of this House Sri K. H. Patil that there has been abuse of privilege on my part and it refers to a statement I am alleged to have made in Bombay. When a man of some importance goes to a place, all the Press people meet him at Press Conference and put a number of questions and he answers. It very often happens that they take the answers and report in their own way. Let me make it very clear. Let there be no doubt about it. I am sorry I have not got that copy with me here. Anyway, I have made up my mind that within two or three weeks I am going to make arrangement for my successor and I am leaving. I do not know where there is any abuse of privilege at all. A question was asked whether it was not a fact that considerable amount of pressure was brought on me and that I am receiving a number of letters that I must continue here. I have said that considerable amount of pressure was brought on me and a member accompanied me from here to Bombay because he could not get audience here. Do you not think that it is a matter for consideration ? I have considered all these things. I considered what an amount of pressure is brought on me. I have received a number of letters and am still receiving.

But I have made up my mind. In view of the responsibility I have to bear being onerous, it is not possible for me to continue as Chief Minister possibly for more than two or three weeks after this Session. I do not think thre is any privilege involved and there is no question of my having done anything which affects the privilege of this House.

Sri S. SIVAPPA (Sravanabelagola).—Sir, the statement of the Chief Minister had made the position amply clear and he has said in clear-cut terms that he is relinquishing his office as Chief Minister within two or three weeks. So, all this question of privilege ends. We do not like to press the Motion any further.

†Sri K. H. PATIL.—Sir, I being the mover of the Motion does not wish to press it in view of the statement made by the Chief Minister and the suggestion of our Leader of Opposition. But, one point I would like to bring to his kind notice and that is, the Press people are equally important in a democratic set up. He being a very big man in India to-day by virtue of his being the president of the All-India Congress..

Sri S. NIJALINGAPPA.—Thank you very much.

Sri K. H. PATIL.—I would like our Sri Nijalingappa to be more alert in making any statement so that confusion may not be created in the minds of others. I am very grateful to him for making the point clear and I pray that he may earn a very good name as the President of the All-India Congress. If possible he can handover charge in two or three days because as per his statement he wants two or three weeks. If he cannot do in two or three days, how can he be able to tackle problems all over India? With this assurance of the Chief Minister, I am withdrawing the privilege motion.

Sri H. SIDDAVEERAPPA.—Sir, on this occasion it would not be inappropriate if I mention a few words about it because during the last two months in this session we were mentioning this subject time and again and almost every day in one manner or the other this was coming up. What all we were anxious is that our Chief Minister and also the Congress President, because both offices are in one person coming from our State *i. e.*, Karnatak, his name should not be dragged in, into any kind of misunderstanding. Therefore we were saying in very clear terms then and now also that we were not anxious that he should decide this way or that way, and the choice is his. Now that he has taken a decision to remain as Congress President, we wish him well because he is the President from Karnatak and we want him to bring a good name. Wherever he is, we wish him well.

Sri S. NIJALINGAPPA.—While thanking the members I wish to say that Mr. Patil is clever in his own way. He says let me be cautious while talking to press. I want to tell him that he has not got sufficient experience of the press and he has not met many, specially in the press. It always happens and that I have made clear.

PRIVILEGE MOTIONS *re :* PURCHASE OF PALACE OF THE TRAVANCORE MAHARAJA IN BANGALORE

Sri H. SIDDAVEERAPPA.—Sir, I think I have made it clear on that day. I am making one definite statement. When the Leader of the Opposition mentioned about it, I think on 1st August 1967, this is what he clearly said.

" ಮತ್ತೊಂದು ವಿಚಾರ ಇತ್ತೀಚೆಗೆ ಗೊತ್ತಾಗಿದೆ. ಈ ನರಸಿಂಹರಾಜರು ಯಾರೋ ಒಬ್ಬ ದೊಡ್ಡ ಶ್ರೀಮಂತರು, ಅವರು ಮಹಾರಾಜರು ಎಂದು ಹೇಳಬಹುದು. ಅಂಥವರ ಒಂದು ಮನೆ

ಯನ್ನು ಖರೀದಿ ಮಾಡುವುದಕ್ಕೆ ಹೊರಟಿದ್ದಾರೆ. ಸರ್ಕಾರಕ್ಕೆ ಆಫೀಸುಗಳಿಗೆ ಸರಿಯಾದ ಜಾಗವಿಲ್ಲ ಎಂದು ಬೆಂಗಳೂರು—ಬಳ್ಳಾರಿ ರಸ್ತೆಯಲ್ಲಿರುವ ತಿರುವಾಂಕೂರು ಮಹಾರಾಜರ ಅರಮನೆಯನ್ನು ಖರೀದಿ ಮಾಡುವುದಕ್ಕೆ ಹೊರಟಿದ್ದಾರೆ. ಇಷ್ಟು ಹೊತ್ತಿಗೆ ಖರೀದಿ ಆಗಿದೆಯೋ ಏನೋ ಗೊತ್ತಿಲ್ಲ. 18—20 ಲಕ್ಷ ರೂಪಾಯಿ ಕೊಟ್ಟು ಅದನ್ನು ಕೊಂಡುಕೊಳ್ಳಬೇಕೆಂದು ಪ್ರಯತ್ನ ನಡೆಯುತ್ತಿದೆ."

Once again we hear that you intend purchasing this building for 18 to 20 lakhs. Is there any principle about it ?

ಸರ್ಕಾರದ ಖಜಾನೆ ಮೇಲೆ ನಿಮ್ಮನ್ನು ಕೂರಿಸಿದ್ದೇವೆ. ಆ ಖಜಾನೆ ನಿಮ್ಮದು ಎನ್ನುವ ಭಾವನೆ ಮಾಡಿಕೊಳ್ಳಬೇಡಿ. ಇದು ಎರಡೂವರೆ ಕೋಟಿ ಜನಗಳಿಗೆ ಸೇರಿದ್ದು.

Then there was no specific reply to that. Then Sri C. K. Rajiah Setty sought to raise this matter through a short notice question No. 24 on 12th March 1968. There also the significant thing we can find is :

"ಇನ್ನೂ ಕಟ್ಟಡ ತೆಗೆದುಕೊಂಡಿಲ್ಲ, ಪ್ರಪೋಜಲ್ ಇದೆ. ತೆಗೆದುಕೊಂಡಮೇಲೆ ನಮ್ಮ ಕಂಟ್ರೋಲಿಗೆ ಬಂದ ಮೇಲೆ ಯಾವ ಆಫೀಸುಗಳನ್ನು ಇಲ್ಲಿ ಲೊಕೇಟ್ ಮಾಡಬೇಕೆಂಬುದನ್ನು ನಿರ್ಧಾರ ಮಾಡುತ್ತೇವೆ."

ಎಂದು ಹೇಳಿದ್ದಾರೆ. ಆಮೇಲೆ ಶ್ರೀಮಾನ್ ಎಚ್. ಎಸ್. ನಂಜೇಗೌಡರು ಈ ರೀತಿ ಪ್ರಶ್ನೆ ಕೇಳಿದರು

"ಈ ಬಿಲ್ಡಿಂಗ್ ಎಷ್ಟು ಬಾಳುತ್ತದೆ ಎಂದು ಇಲಾಖೆಯವರನ್ನು ಕೇಳಿದ್ದೀರಾ ? ಕೇಳಿದ್ದರೆ 3 ಲಕ್ಷ ರೂಪಾಯಿ ಬಾಳುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಯೇ ? ಇದು ಇರುವುದು 5 ಎಕರೆ ವಿಸ್ತೀರ್ಣ ಅಲ್ಲವೇ ? ಹಾಗಾದರೆ ಎಕರೆಗೆ 3 ಲಕ್ಷ ರೂಪಾಯಿ ಆದರೆ 15 ಲಕ್ಷ ರೂಪಾಯಿ ಆಗಲಿಲ್ಲವೇ ! ನಮ್ಮ ಮಹಾರಾಜರ ಜಮೀನನ್ನು 10 ಸಾವಿರದಿಂದ 15 ಸಾವಿರ ರೂಪಾಯಿ ಗಳವರೆಗೂ ನಿಮ್ಮ ಪಕ್ಷದವರೇ ಕೊಂಡುಕೊಂಡದ್ದು ನಿಜವಲ್ಲವೆ ! ಹಾಗಿದ್ದರೆ ಇದನ್ನು ಎಕರೆಗೆ 3 ಲಕ್ಷ ರೂಪಾಯಿನಂತೆ ಕೊಂಡುಕೊಳ್ಳದೇ ಇರುವುದರ ಔಚಿತ್ಯವೇನು ! ಇದಕ್ಕೆ ಉತ್ತರ ಹೀಗೆ ಕೊಟ್ಟಿದ್ದಾರೆ :

"ನೆಗೋಷಿಯೇಟ್ ಮಾಡಿಯೇ ಅವರ ಕಡೆಯಿಂದ ತೆಗೆದುಕೊಂಡಿದ್ದೇವೆ. ಇದರ ಉಪಯೋಗ, ಉಪಯುಕ್ತತೆಯನ್ನೆಲ್ಲಾ ಪರಿಶೀಲನೆ ಮಾಡಿ ತೆಗೆದುಕೊಂಡಿದ್ದೇವೆ."

The most important point we can notice here is that the hon'ble Minister is not specific in his reply. He asked whether there was an estimate prepared by the officers. While replying to the half hour discussion he was more explicit and clearly mentioned some of the points in his reply to this House. According to that he says :

"ಈ ಬಗ್ಗೆ ನಾನು ಹೇಳಬೇಕಾದರೆ 1965 ರಿಂದಲೂ ನಹ ಈ ಬಿಲ್ಡಿಂಗನ್ನು 18 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬೇಕೆಂಬ ವಿಚಾರವಿದ್ದು 1967 ಡಿಸೆಂಬರ್ ತಿಂಗಳಲ್ಲಿ ಒಂದು ನಿರ್ಣಯವಾಗಿದೆ."

ಎಂದು ಹೇಳಿದರು.

ಇನ್ನೂ ಬಿಲ್ಡಿಂಗ್ ತೆಗೆದುಕೊಂಡಿಲ್ಲ ಅದು ಪರಿಶೀಲನೆಯಲ್ಲಿ ಇದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಇಲ್ಲಿ ಹೇಳಿದ್ದಾರೆ. ಒಂದು ಚದುರ ಗಜಕ್ಕೆ 50 ರೂಪಾಯಿ ದರದಂತೆ ಲೆಕ್ಕ ಹಾಕಿದರೆ ಇದು ಸುಮಾರು ಹನ್ನೊಂದು ಲಕ್ಷ ಚಿಲ್ಲರೆ ಬೆಲೆಯಾಗುತ್ತದೆ. ಇದರಲ್ಲಿ ಬಿಲ್ಡಿಂಗ್ ಲೆಕ್ಕ ಹಾಕಿದರೂ ಕೂಡ ಸ್ವಲ್ಪ ಹೆಚ್ಚೂ ಕಡಿಮೆ ಅಷ್ಟೇ ಆಗುತ್ತದೆ. ಶ್ರೀಮಾನ್ ರಾಜಯ್ಯಶೆಟ್ಟಿಯವರು ಶೆಟ್ಟರು ಆಗಿರುವುದರಿಂದ ಅವರು ವ್ಯಾಲ್ಯುಯೇಷನ್ ಮಾಡಿರುವುದು ಸರಿಯಾಗಿದೆ ಎಂದು ಅರ್ಥ ಬರುತ್ತದೆ. ಇದರಲ್ಲಿ ಮುಖ್ಯವಾಗಿ ಇರುವುದು ಏನೆಂದರೆ ನನಗೆ ಗೊತ್ತಿರುವ ವರ್ತಮಾನದ ಪ್ರಕಾರ ಇರಾಖೆಯು ಚೀಫ್ ಎಂಜಿನಿಯರ್ ಅವರಿಗೆ ಇದನ್ನು ಕಳಿಸಿ ಅವರಿಂದ ಎಸ್ಟಿಮೇಟು ತರಿಸಿದ್ದಾರೆ. ಚೀಫ್ ಎಂಜಿನಿಯರ್ ಅವರು ಇದು 13 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದು ಎಸ್ಟಿಮೇಟು ಮಾಡಿದ್ದಾರೆ. ಇದು ನಿಜವೆ ? ಅಲ್ಲವೆ ! ಇದು ನಿಜವಾಗಿದ್ದರೆ 13 ಲಕ್ಷ ಎಂದು ಅಂದಾಜು ಕಟ್ಟಿರುವುದಕ್ಕೆ 18 ಲಕ್ಷ ರೂಪಾಯಿ ಏತಕ್ಕೆ ಕೊಟ್ಟರು ! ಇದಕ್ಕೆ ಏನು ಕಾರಣ ? 5 ಲಕ್ಷ ರೂಪಾಯಿ ಜಾಸ್ತಿ ಕೊಡುವುದಕ್ಕೆ ಕಾರಣವೇನು ? ಏತಕ್ಕೆ ಇದನ್ನು ಓಪನ್ ಡೀಲ್ ಆಗಿ

(SRI H. SIDDAVEERAPPA)

ಮಾಡಲಲ್ಲ ! ಒಪ್ಪಕ ರೀತಿಯಾಗಿ ಮಾಡಿದ್ದರೆ ಈ ರೀತಿ ಅನುಮಾನ ಬರುತ್ತಿರಲಿಲ್ಲ. ಸಿಜರ್ಸ್ ವೈಫ್ ಮಸ್ಟ್ ಬಿ ಅಬವ್ ಸಸ್ಪೀಷನ್ ಎನ್ನುವ ರೀತಿಯಲ್ಲಿ ನಾರ್ಮಜನಿಕ ಸಂಬಂಧಪಟ್ಟ ಕೆಲಸ ಹಾಗಿರಬೇಕು. ಆ ರೀತಿ ಇದ್ದರೆ ಚೆನ್ನಾಗಿತ್ತು. ಇದು ರೆಸಿಡೆನ್ಸಿಯರ್ ಬಿಲ್ಡಿಂಗ್ ಆಗಿದೆ. ಅದು ಬೇರೆ ವಿಚಾರ ಇರಲಿ. ಅವರು ಹೇಳಿ ಬಿಟ್ಟರೆ ಆಯಿತು. ನೀವು ತೆಗೆದುಕೊಳ್ಳಿ ಅಂದರೆ ನಾವು ತೆಗೆದುಕೊಳ್ಳುವುದಿಲ್ಲ, ನೀವು ಬೇಡ ಅಂದರೆ ನಾವು ಬಿಡುವುದಿಲ್ಲ, ನಮಗೆ ಯಾವ ರೀತಿ ಬೇಕೋ ಆ ರೀತಿ ಮಾಡುತ್ತೇವೆ ಎಂದು ಹೇಳುವ ಹಾಗೆ ಉತ್ತರ ಇದೆ. ಆದುದರಿಂದ ನಾನು ಖಚಿತವಾಗಿ ಒಂದು ಪ್ರಶ್ನೆ ಕೇಳುತ್ತೇನೆ. ಚೀಫ್ ಎಂಜನಿಯರ್ ಅವರು ಈ ರೀತಿ ಏನಾದರೂ ಒಂದು ಖಚಿತವಾದ ಎಸ್ಟಿಮೇಟು ಮಾಡಿ ಕೊಟ್ಟಿದ್ದರೇ ? ಅದನ್ನು ಈ ಸಭೆಯ ಮುಂದೆ ಇಡದೇ ಇದ್ದರೆ ಸಭೆಗೆ ಕೊಡಬೇಕಾದ ವಿವರವನ್ನು ಸಪ್ಲೈಸ್ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಇದನ್ನು ಸಭೆಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಒಬ್ಬ ಮಂತ್ರಿಯ ಮೇರೆ ಮಾಡುವ ಅಪಾದನೆ ಅಷ್ಟೇ ಅಲ್ಲ. ಈ ಅಪಾದನೆ ಇರುವುದು ಎಲ್ಲಾ ಮಂತ್ರಿಗಳ ಮೇರೆ. ಇದು ಕ್ಯಾಬಿನೆಟ್ ಡಿಸಿಷ್ಣ ಇದೆ. ಒಬ್ಬ ಮಂತ್ರಿ ಏನು ಮಾಡುತ್ತಾನೆ ಎಂದು ಹೇಳಬಹುದೇ ? ಕ್ಯಾಬಿನೆಟ್ ಡಿಸಿಷ್ಣ ಆಗಬೇಕಾದರೆ ಎಲ್ಲರೂ ಸೇರಿ ವಿಚಾರ ಮಾಡಿ ತೀರ್ಮಾನ ಮಾಡಿದರೇ ? 5 ಲಕ್ಷ ರೂಪಾಯಿ ಜಾಸ್ತಿ ಹೇಗೆ ಕೊಟ್ಟರು ? ಆದುದರಿಂದ ಈ ವಿಷಯ ಪ್ರಿವಿಲೆಜ್ ಕಮಿಟಿಗೆ ಹೋಗಬೇಕಾದ ವಿಷಯ, ಇದು ಅತಿ ಪ್ರಾಮುಖ್ಯವಾದ ವಿಷಯ. ಈ ವಿಷಯ ಇದ್ದಹಾಗೆ ಹೇಳಬೇಕು. ಜವಾಬು ಕೊಡುವ ಮುಂಚೆ ಅವರಿಗೆ ಪ್ರಾರ್ಥನೆ ಮಾಡುತ್ತೇನೆ, ಇದನ್ನು ಸ್ಪಷ್ಟೀಕರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಚೀಫ್ ಎಂಜಿನಿಯರರು 13 ಲಕ್ಷ ರೂಪಾಯಿಗೆ ಈ ಬಿಲ್ಡಿಂಗ್ ಬೆಲೆ ಅಂದಾಜು ಮಾಡಿರುವುದು ಎಂದು ಶ್ರೀ ಸಿದ್ದವೀರಪ್ಪನವರು ಖಚಿತವಾಗಿ ತಿಳಿಸಿದ್ದಾರೆ. ಖಚಿತವಾಗಿ ಗೊತ್ತಾಗಿರುವ ವಿಷಯ ಸಭೆಗೆ ಹೇಳದೇ ಇರುವುದರಿಂದ, ಸಭೆಗೆ ವಿಷಯ ತಿಳಿಸದೇ ಇರುವುದರಿಂದ ಉದ್ದೇಶ ಪೂರ್ವಕವಾಗಿ ಏನೋ ಮುಚ್ಚಿಡುತ್ತಿದ್ದಾರೆ, ಎಂದು ಅಪಾದನೆ ಬರುತ್ತದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಫೈಲನ್ನು ಸಭೆಯ ಮುಂದಿಟ್ಟು ಎಲ್ಲ ಸದಸ್ಯರ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿ ಕೊಡಬೇಕು.

†ಶ್ರೀ ವೀರೇಂದ್ರ ಪಾಟೀಲ್ (ರೋಕೋಪಯೋಗಿ ಶಾಖೆಯ ಮಂತ್ರಿಗಳು).—ಶ್ರೀಮಾನ್ ಸಿದ್ದವೀರಪ್ಪನವರು, ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ರಾಮಪ್ಪಿಯ ಬಿಲ್ಡಿಂಗ್ ಸರಕಾರ ಖರೀದಿ ಮಾಡುವ ವ್ಯವಹಾರದ ಬಗ್ಗೆ ಎಲ್ಲಾ ವಿವರಗಳನ್ನು ಈ ಸಭೆಗೆ ಕೊಟ್ಟಿಲ್ಲ ಎಂದು ಹೇಳಿದರು. ಮತ್ತು ಚೀಫ್ ಎಂಜಿನಿಯರರು 13 ಲಕ್ಷ ರೂಪಾಯಿಗೆ ಇದರ ಅಂದಾಜು ಮಾಡಿದ್ದರೂ ಕೂಡ 5ಲಕ್ಷ ರೂಪಾಯಿ ಜಾಸ್ತಿಗೆ ಕೊಟ್ಟಿದ್ದೀರಿ ? ಈ ವಿಚಾರ ಹೇಳಲಿಲ್ಲ ಎಂಬ ಮಾತು ಹೇಳಿದ್ದಾರೆ. ಈ ವಿಚಾರ ಸಭೆಯಲ್ಲಿ ಚರ್ಚೆಗೆ ಒಂದೂರೆಯು ನಲ ಬಂದಿದೆ. ಅರ್ಧ ಗಂಟೆಯ ಚರ್ಚೆ ಕೂಡ ಆಗಿದೆ. ಈ ಚರ್ಚೆ ಮತ್ತು ಪ್ರಶ್ನೋತ್ತರ ಕಾಲದಲ್ಲಿ ಮುಖ್ಯವಾಗಿ ಇದರ ಬಗ್ಗೆ ಬಂದಂಥ ವಿಚಾರ ಅಂದರೆ 18 ಲಕ್ಷ ರೂಪಾಯಿ ಕೊಟ್ಟು ಈ ಬಿಲ್ಡಿಂಗ್ ತೆಗೆದುಕೊಳ್ಳುವಂಥ ಅವಶ್ಯಕತೆ ಏನು ಇತ್ತು ? ಇದು ಮುಖ್ಯವಾದ ವಿಚಾರ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—13ಲಕ್ಷ ರೂಪಾಯಿಗಳಿಗೆ ಅಂದಾಜುಮಾಡಿದ್ದಾರೆ ಎನ್ನುವ ವಿಷಯವನ್ನು ನಮಗೆ ತಿಳಿಸಲಿಲ್ಲ ಮತ್ತು ಶ್ರೀಮಾನ್ ನಂಜೇಗೌಡರು ಆ ಪ್ರಶ್ನೆಯನ್ನು ಖಚಿತವಾಗಿ ಕೇಳಿದ್ದಾರೆ, ಅಧಿಕಾರಿಗಳಿಂದ ಅಂದಾಜು ಮಾಡಿಸಲಿಲ್ಲವೇ ಎಂದು ಆದರೂ ಮಂತ್ರಿಗಳು ಆ ಬಗ್ಗೆ ಸಭೆಗೆ ಏನೂ ತಿಳಿಸಿಲ್ಲ ಎನ್ನುವುದೇ ಮುಖ್ಯವಾದುದು.

ಶ್ರೀ ವೀರೇಂದ್ರ ಪಾಟೀಲ್.—ನಾನು ಎಲ್ಲವನ್ನೂ ಸಭೆಗೆ ಹೇಳುತ್ತೇನೆ. ದಯವಿಟ್ಟು ಪ್ಲೀಸ್ ಕೇಳಿ.

ಈಗ ಸಭೆಯ ಮುಂದೆ ಬಂದಿರುವಂಥ ಪ್ರಶ್ನೆ 18 ಲಕ್ಷ ರೂಪಾಯಿಗಳಿಗೆ ಏಕೆ ತೆಗೆದುಕೊಂಡಿರಿ ಅದಕ್ಕೆ ಏನು ಅವಶ್ಯಕತೆ ಇತ್ತು, 18 ಲಕ್ಷ ರೂಪಾಯಿ ಖರ್ಚು ಮಾಡಿ ವಿಧಾನ ಸೌಧದ ಸುತ್ತ ನಿಮ್ಮದೇ ನಿವೇಶನವಿದೆ, ಅಲ್ಲಿ ಕಟ್ಟಬಹುದಾಗಿತ್ತು, ರೇಸ್‌ಕೋರ್ಸ್ ಎರಡನೇ ಕಡೆಗೆ ವರ್ಗಾಯಿಸಬೇಕೆಂಬ ಅಭಿಪ್ರಾಯವಿರುವುದರಿಂದ ಅಲ್ಲಿ ಕಟ್ಟಬಹುದಾಗಿತ್ತು, ಸೆಂಟ್ರಲ್ ಜೈಲ್ ಎರಡನೇ ಕಡೆಗೆ ವರ್ಗಾಯಿಸಬೇಕೆಂಬ ಅಭಿಪ್ರಾಯವಿರುವುದರಿಂದ ಅಲ್ಲಿ ಕಟ್ಟಬಹುದಾಗಿತ್ತು ಎಂದು ಈ ಪ್ರಶ್ನೆಗಳು ಬಂದಿವೆಯೇ ಹೊರತಾಗಿ ಚೀಫ್ ಇಂಜನಿಯರ್ ಎಷ್ಟಕ್ಕೆ ಎಸ್ಟಿಮೇಟ್ ಮಾಡಿದರು, ಎಕ್ಸಿಕ್ಯೂಟಿವ್ ಇಂಜನಿಯರ ಎಷ್ಟಕ್ಕೆ ಎಸ್ಟಿಮೇಟ್ ಮಾಡಿದರು, ಆದಕ್ಕಿಂತ ಹೆಚ್ಚು ಕೊಟ್ಟಿದ್ದೀರಿ, ಕಡಮೆ ಕೊಟ್ಟು

ದ್ದೀರಾ ಎನ್ನುವ ಪ್ರಶ್ನೆ ಅಷ್ಟೊಂದು ಪ್ರಾಮುಖ್ಯವಾಗಿ ಬಂದಿರಲಿಲ್ಲ. ಯಾವಾಗ ಏನೇನು ಪ್ರಶ್ನೆ ಬರುತ್ತದೆ ಆ ಪ್ರಶ್ನೆಗೆ ಉತ್ತರವನ್ನು ನಾವು ಕೊಟ್ಟುಕೊಂಡು ಹೋಗಿದ್ದೇವೆ. ಈ ಒಂದು ಉತ್ತರ ಕೊಡುವುದರಲ್ಲಿ ಮಾನ್ಯ ಸದಸ್ಯರಿಗೆ ತಿಳಿದಂತೆ ಯಾವುದೇ ಸಮಾಚಾರವನ್ನು ಮುಚ್ಚಿಡಲು ಪ್ರಯತ್ನ ಮಾಡಲಿಲ್ಲ ಮತ್ತು ಆ ರೀತಿ ಸಮಾಚಾರವನ್ನು ಮುಚ್ಚಿಡುವಂಥ ಪ್ರವೃತ್ತಿ, ಸ್ವಭಾವ ನನ್ನಲ್ಲಿಲ್ಲ. ಇವೊತ್ತಿನ ದಿವಸ ಏನೇನು ಕೇಳುತ್ತಾರೆ, ಯಾವುದನ್ನು ಹೇಳಿ ಎನ್ನುತ್ತಾರೆ ಅದನ್ನೆಲ್ಲ ಹೇಳುವುದಕ್ಕೆ ತಯಾರಿದ್ದೇನೆ.

ಈಗ ಒಂದು ವಿಚಾರವೆಂದರೆ ಮಾನ್ಯ ಸಿದ್ದವೀರಪ್ಪನವರು ಅವರ ಹೈವೇಜ್ ಮೋಷನ್‌ನಲ್ಲಿ ಹೀಗೆ ಬರೆದಿದ್ದಾರೆ.

"The Hon'ble Minister said 18 lakhs as the value of the building was fixed after the officers of the Public Works examined the building."

ನಾನು ಎಲ್ಲ ಆ ರೀತಿ ಹೇಳಿದ್ದೇನೆಂದು ನೋಡಿದೆ. ನಾನು ಅರ್ಧಗಂಟೆ ಕಾಲದ ಚರ್ಚೆಗೆ ಏನು ಉತ್ತರ ಕೊಟ್ಟಿದ್ದೇನೆ, ಅಲ್ಪಕಾರಾವಧಿ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದೇನೆ ಅದೆಲ್ಲ ಇನ್ನೂ ನನ್ನ ಹತ್ತಿರ ಕರೆಕ್ಷನ್‌ಗೆ ಬಂದಿಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಏನೋ ಬರೆದಿದ್ದಾರೆ, ಪ್ರೊಸೀಡಿಂಗ್ಸ್ ಬಂದಿದೆ, ಅದೇ ಅಂತಿಮ ಎಂದು ತಿಳಿದುಕೊಂಡು ಮಾತನಾಡಿದರೆ ಕಷ್ಟವಾಗುತ್ತದೆ. ಅನೇಕ ವಿಚಾರಗಳು ನಾವು ಏನು ಹೇಳುತ್ತೇವೆ ಅದರಲ್ಲಿ ಕೆಲವು ವಿಚಾರಗಳು ಸರಿಯಾಗಿ ರಿಪೋರ್ಟ್ ಆಗುತ್ತವೆ, ಕೆಲವು ಸರಿಯಾಗಿ ರಿಪೋರ್ಟ್ ಆಗಲಿಕ್ಕಿಲ್ಲ, ಕೆಲವು ಕರೆಕ್ಷನ್ ಮಾಡಬೇಕಾಗುತ್ತದೆ. ಮಾನ್ಯ ಸಿದ್ದವೀರಪ್ಪನವರು ಹೇಳಿದ ಹಾಗೆ 1965ರಿಂದ 18 ಲಕ್ಷಕ್ಕೆ ತೆಗೆದುಕೊಳ್ಳುವುದಕ್ಕೆ ನಾವು ಮನಸ್ಸು ಮಾಡಿದ್ದೇವೆ ಎಂದು ನಾನು ಹೇಳಿರುವುದಾಗಿ ರಿಪೋರ್ಟ್ ಆಗಿದೆ, ಆ ರೀತಿ ನಾನು ಹೇಳಲಿಲ್ಲ. ಒಂದು ವೇಳೆ 1965ರಿಂದ 18 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಿದ್ದರೆ ನೆಗೋಷಿಯೇಷನ್‌ಗೆ ನಮ್ಮ ಸೆಕ್ರೆಟರಿಯನ್ನು ಕಳಿಸುವಂಥ ಅವಶ್ಯಕತೆ ಬರುತ್ತಿರಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈ ಬಗ್ಗೆ ನಾನು ಹೇಳಬೇಕಾದರೆ 1965ರಿಂದಲೂ ಸಹ ಈ ಬಿಲ್ಡಿಂಗನ್ನು 18 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬೇಕೆಂಬ ವಿಚಾರವಿದ್ದು 1967ರ ಡಿಸೆಂಬರ್ ತಿಂಗಳಿನಲ್ಲಿ ಒಂದು ನಿರ್ಣಯವಾಗಿದೆ ಎಂದು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀರ್.—ನಾನೂ ಅದೇ ಹೇಳುತ್ತಿದ್ದೇನೆ. ಕರೆಕ್ಷಾಗಿ ರಿಪೋರ್ಟಾಗಿಲ್ಲ ಇನ್ನೂ ನನ್ನ ಮುಂದೆ ಬಂದಿಲ್ಲ. ಕರೆಕ್ಟ್ ಮಾಡಿಲ್ಲ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಸೆಕ್ರೆಟೇರಿಯಟಿನಿಂದ ತೆಗೆದುಕೊಂಡು ಬಂದಿದ್ದು ಇಲ್ಲಿ ಓದುತ್ತಿದ್ದಾರೆ. ಮೊನ್ನೆ ಪ್ರಿವಿಲೇಜ್ ಮೋಷನ್ ಬರುವುದು ನನಗೆ ಗೊತ್ತಿರಲಿಲ್ಲ. ನಾನು ಎಲ್ಲೋ ಹೋಗಬೇಕೆಂದಿದ್ದಾಗ ರಾಮಪ್ರಿಯ ಬಿಲ್ಡಿಂಗ್ ಸಂಬಂಧದಲ್ಲಿ ಒಂದು ಮೋಷನ್ ಬಂದಿದೆ ಎಂದು ನಾನು ಕುಳಿತುಕೊಂಡೆ. ಅನಂತರ ನಮ್ಮ ಸಿಬ್ಬಂದಿಯವರಿಗೆ ಕಳುಹಿಸಿ ಒಂದು ಕಾಪಿ ತರಿಸಿಕೊಂಡಿದ್ದೇನೆ, ಅದನ್ನು ಇನ್ನೂ ಕರ್‌ಕ್ಟ್ ಮಾಡಿಲ್ಲ. ಇಲ್ಲಿ ನಾವು ಏನು ಹೇಳುತ್ತೇವೆ ಅದು ವರ್ಡ್ ಬೈ ವರ್ಡ್ ಕರೆಕ್ಟಾಗಿ ರಿಪೋರ್ಟ್ ಆಗುತ್ತದೆ ಎಂದು ತಿಳಿದುಕೊಂಡರೆ ಅದರ ಪ್ರತಿಯನ್ನು ನಮ್ಮ ಕರೆಕ್ಷನ್‌ಗೆ ಕಳುಹಿಸಿಕೊಡುವ ಅವಶ್ಯಕತೆ ಇರುವುದಿಲ್ಲ. ನಾನು ಈ ಬಗ್ಗೆ ಈ ಸಭೆಯಲ್ಲಿ ಹೇಳಿರುವುದರ ಪ್ರತಿ ನನ್ನ ಹತ್ತಿರ ಬಂದಿಲ್ಲ, ಇನ್ನೂ ಕರೆಕ್ಟ್ ಮಾಡಿಲ್ಲ.

Sri K. H. RANGANATH (Mudigere).—Sir, it is a very serious allegation that the Hon'ble Minister is making. We are not expected to add or delete ; we are only expected to correct in respect of spellings and so on. To say that it is not properly reported or correctly reported is a very serious allegation. ಅದರಲ್ಲಿ ಹೊಸದಾಗಿ ಸೇರಿಸುವುದಕ್ಕೆ ಅಥವಾ ತೆಗೆಯುವುದಕ್ಕೆ ನಮಗೆ ಅಧಿಕಾರವಿಲ್ಲ. ನಾವು ಯಾರನ್ನು ನಂಬಬೇಕು, ಪತ್ರಿಕೆಗಳಲ್ಲಿ ಬರುವುದನ್ನು ನಂಬಬೇಕೇ, ನಮ್ಮ ವರದಿಗಾರರನ್ನು ನಂಬಬೇಕೇ ? ಹಾಗಿಲ್ಲ ಎಂದರೆ ಯಾರು ಹೇಳಿದುದನ್ನೂ ನಾವು ನಂಬುವುದಕ್ಕಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಒಂದು ಟೇಪ್ ರಿಕಾರ್ಡರ್ ಇಟ್ಟುಕೊಳ್ಳಬೇಕಾಗುತ್ತದೆ. ವರದಿಯಾಗಿರುವುದರಲ್ಲಿ ಏನಾದರೂ ವ್ಯತ್ಯಾಸ ಬಂದಾಗ ರಿಕಾರ್ಡ್ ಪ್ಲೇ ಮಾಡಬೇಕಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ನಾವು ಏನೇನು ಭಾಷಣವನ್ನು ಮಾಡುತ್ತೇವೆ ಅದರಲ್ಲಿ ಏನೂ ಬದಲಾವಣೆಯಾಗಲಾರದಂತೆ ಕರೆಕ್ಟಾಗಿ ರಿಪೋರ್ಟ್ ಆಗುತ್ತದೆ ಎಂದು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರಿಗೆ ಹೇಳಬೇಕಾಗಿದ್ದರೆ ಬಹಳ ವೇಗವಾಗಿ ಭಾಷಣ ಮಾಡುತ್ತೇವೆ. ನಾನು ಯಾರ ಮೇಲೂ ದೋಷಾರೋಪಣೆ ಮಾಡುತ್ತಿಲ್ಲ. ಒಬ್ಬೊಬ್ಬರ ಭಾಷಣದ ವೇಗ ಒಂದೊಂದು ರೀತಿಯಾಗಿರುತ್ತದೆ. ಕೆಲವರು 15 ಪೇಜಿಗೆ ಮಾಡುತ್ತಾರೆ, ಕೆಲವರು 150 ಪೇಜಿಗೆ ಮಾಡುತ್ತಾರೆ. ರಿಪೋರ್ಟ್ ಮಾಡುವವರಿಗೂ ಒಂದು ಶಕ್ತಿ ಇರುತ್ತದೆ. ಅದಕ್ಕಾಗಿ ನಾನು ಹೇಳುವುದು ಏನೆಂದರೆ ರಿಪೋರ್ಟ್ ಮಾಡಿದ ಮೇಲೆ ನಮ್ಮ ಹತ್ತಿರ ಅದನ್ನು ಕರೆಕ್ಷನ್‌ಗೆ ಕಳಿಸುತ್ತಾರೆ. ಅದರಲ್ಲಿ ಏನಾದರೂ ನಾವು ಇಲ್ಲಿ ಭಾಷಣ ಮಾಡಿದ ಪ್ರಕಾರ ಇಲ್ಲದಿದ್ದರೆ ಸಣ್ಣಪುಟ್ಟ ಕರೆಕ್ಷನ್ ಮಾಡುವುದಕ್ಕೆ ಅವಕಾಶವಿದೆ. ಭಾಷೆ ಮುಂತಾದ್ದನ್ನು ಉತ್ತಮ ಪಡಿಸುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ ನಾನು ಏನಾದರೂ 40 ಸಾವಿರ ಎಂದು ಹೇಳಿದ್ದು ಅದನ್ನು 40 ಲಕ್ಷ ಎಂದು ಬರೆದುಕೊಂಡಿದ್ದರೆ 40 ಸಾವಿರ ಎಂದು ಹೇಳುವುದು ಸರಿಯಿಲ್ಲ 40 ಲಕ್ಷ ಎಂದು ಬರೆದಿದೆ, ಅದೇ ಸರಿ ಎಂದರೆ ಅದರ ಬಗ್ಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಈಗ ನಾನು ಹೇಳುವುದು ಏನೆಂದರೆ 1965ರಲ್ಲಿ 18 ಲಕ್ಷ ರೂಪಾಯಿಗಳಿಗೆ ಈ ಕಟ್ಟಡವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಧಾರ ಮಾಡಿದ್ದರೆ ನಾವು ನೆಗೋಷಿಯೇಟ್ ಮಾಡುವುದಕ್ಕೆ ಸೆಕ್ರೆಟರಿಯನ್ನು ಕಳಿಸಿಕೊಡುವಂಥ ಅವಶ್ಯಕತೆ ಏನಿತ್ತು ಅದನ್ನಾದರೂ ಹೇಳಿರಿ. ಈ ಪ್ರೊಸೀಡಿಂಗ್ಸ್‌ನಲ್ಲಿ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರನ್ನು ನೆಗೋಷಿಯೇಟ್ ಮಾಡುವುದಕ್ಕೆ ಕಳಿಸಿಕೊಟ್ಟಿದ್ದೇವೆ ಎಂದು ಇದೆ. 18 ಲಕ್ಷಕ್ಕೆ ತೆಗೆದುಕೊಳ್ಳಲು ಒಪ್ಪಿದ್ದಾರೆ ನೆಗೋಷಿಯೇಷನ್ ಏಕೆ ಬರುತ್ತದೆ? ಇದರ ಮೇಲಾದರೂ ಇನ್‌ಫರೆನ್ಸ್ ಡ್ರಾ ಮಾಡಿ. ಎನೋ ಬರೆದಿದ್ದಾರೆ, ಅದನ್ನೇ ಹಿಡಿದುಕೊಂಡು ಜಗ್ಗುವುದಕ್ಕೆ ಪ್ರಯತ್ನ ಮಾಡೋಣ ಎನ್ನುವ ಮನೋಭಾವ ಬೇಡ. ಯಾವ ರೀತಿ ಆಗಿದೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಭಾಷಣ ಮಾಡುವಾಗ ಎಲ್ಲವನ್ನೂ ಸ್ಪಷ್ಟಪಡಿಸಿದ್ದೇನೆ. 1965 ರಿಂದ 18 ಲಕ್ಷಕ್ಕೆ ತೆಗೆದುಕೊಳ್ಳಬೇಕು ಎನ್ನುವ ನಿರ್ಧಾರವನ್ನು ಯಾರೂ ಮಾಡಿಲ್ಲ. 1965 ರಿಂದ ಆರ್. ಟಿ. ಓ. ಆಫೀಸಿಗೆ ಒಂದು ಕಟ್ಟಡ ಬೇಕು ಎನ್ನುವ ವಿಚಾರ ಎತ್ತು ಎನ್ನುವಂಥ ಮಾತನ್ನು ಹೇಳಿದ್ದೇನೆ. ಇನ್ನೊಂದು ಮಾತನ್ನೂ ಹೇಳಿದ್ದೇನೆ. ಇಲ್ಲಿಯವರೆಗೂ ಎಂದರೆ ಡಿಸೆಂಬರ್ 1967 ರವರೆಗೂ ನಾವು ಏನು ವ್ಯವಹಾರ ಮಾಡಿದ್ದೇವೆ, ಅದರಲ್ಲಿ 18 ಲಕ್ಷಕ್ಕಿಂತ ಕೆಳಗಡೆ ಅವರು ಕಟ್ಟಡವನ್ನು ಕೊಡುತ್ತಾರೆ ಎನ್ನುವಂಥ ವಿಚಾರ ನಮ್ಮ ಗಮನಕ್ಕೆ ಯಾರೂ ತಂದಿಲ್ಲ ಎನ್ನುವ ಮಾತನ್ನೂ ಸ್ಪಷ್ಟವಾಗಿ ಹೇಳಿದ್ದೇನೆ. ಯಾರೋ ಒಬ್ಬರು ವಿಜಿಲೆನ್ಸ್ ಕಮಿಷನ್ನಿಗೆ ಜನವರಿ ತಿಂಗಳಿನಲ್ಲಿ ಬರೆದಿದ್ದಾರೆ. ನಾವು ನಿರ್ಧಾರ ಮಾಡಿದ ಮೇಲೆ ಅದು ವಿಜಿಲೆನ್ಸ್ ಕಮಿಷನ್ನಿಗೆ ಬಂದಿದೆ.

ಶ್ರೀ ಕೆ. ಎಚ್. ಪಾಟೀಲ್.—ಸ್ಟೇಟ್ ಟ್ರಾನ್ಸ್‌ಪೋರ್ಟ್ ಕಮಿಷನರಿಗೆ ಬರೆದಂಥ ಪತ್ರವನ್ನು ಅಧ್ಯಕ್ಷರ ಮುಖಾಂತರ ಕಳಿಸಿಕೊಟ್ಟಿದ್ದೇನೆ. ಆದರೆ ಯಾವ ಕಾಗದವು ಯಾವ ಅಧಿಕಾರಿಗೂ ಬಂದಿಲ್ಲ ಎನ್ನುವ ಅಭಿಪ್ರಾಯ ಬಂದಿದೆ. 13 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬಹುದೆಂದು ನೋಟ್ ಹಾಕಬರೆ 18 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ. ಮೊದಲು ಅವರು ಹದಿನಾರೂವರೆ ಲಕ್ಷರೂಪಾಯಿಗಳಿಗೆ ಕೊಡುತ್ತೇವೆ ಕಮಿರ್ಷಕೂಡಕೊಡುತ್ತೇವೆಂದು ಹೇಳಿದ್ದಾರೆ. ಆದನ್ನು ನಮ್ಮ ಸರ್ಕಾರದವರು 18 ಲಕ್ಷ ರೂಪಾಯಿಗಳಿಗೆ ಕೊಂಡುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಇಂಥದಕ್ಕೆ ಅವಕಾಶ ಕೊಡಬೇಡಿ ಎಂದು ಸಮಿತಿಯನ್ನು ನೇಮಿಸಿ ವಿಚಾರಣೆ ಮಾಡಿದರೆ ಒಳ್ಳೆಯದು ಮತ್ತು ಸತ್ಪರಂಪರೆಯನ್ನು ಕಾಪಾಡಿಕೊಂಡು ಬರಲು. ಅವರು ವಿಚಾರಣೆ ನಡೆಸಿ ಖರೆ ಇದ್ದರೆ ಖರೆ ಎಂದು ಹೇಳಲಿ. ಸಾರ್ವಜನಿಕರಲ್ಲರುವ ಸಂಶಯ ನಿವಾರಣೆಯಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅರ್ಧ ಗಂಟೆಕಾಲದ ಚರ್ಚೆ ನಡೆಯುವ ಕಾಲದಲ್ಲಿ ಒಂದು ಪತ್ರವನ್ನು ಎಲಯ ಮಹಾರಾಜರ ಪ್ರೈವೇಟ್ ಸೆಕ್ರೆಟರಿಯವರು ನಮ್ಮ ರಸ್ತೆ ಸಾರಿಗೆ ಕಾರ್ಪೊರೇಷನ್ನಿಗೆ ಬರೆದು ಅದರಲ್ಲಿ 16 ಲಕ್ಷ ರೂಪಾಯಿಗಳಿಗೆ ಕೊಡುವುದಕ್ಕೆ ಒಪ್ಪಿದ್ದಾರೆ ಎನ್ನುವಂಥ ಮಾತನ್ನು ಬರೆದಿದ್ದಾರೆ ಎಂದು ಹೇಳಿದಾಗ ಆ ಹೊತ್ತು ಹೇಳಿದ ಆ ಆಚಾರ ನನಗೆ ಗೊತ್ತಿಲ್ಲ, ನನ್ನ ಮುಂದೆ ಇರುವ ಫೈಲಿನಲ್ಲಿ ಆ ಕಾಗದ ಪತ್ರಗಳು ಯಾವುವೂ ಇಲ್ಲ, ತಾವು ಕಳಿಸಿಕೊಡಿ, ವಿಚಾರ ಮಾಡುತ್ತೇನೆಂದು ಹೇಳಿದೆ. ಅದರ ಪ್ರಕಾರ ಅವರು ಕಾಗದವನ್ನು ಕಳಿಸಿಕೊಟ್ಟಮೇಲೆ, ಅದು ನನಗೆ ಬಂದ ಮೇಲೆ, ಗವರ್ನಮೆಂಟ್ ಆರ್ಡರ್ ಇಷ್ಯೂ ಆಗುವಂಥದ್ದನ್ನು ತಡೆ ಹಿಡಿದಿದೆ ನೆ. ಗವರ್ನಮೆಂಟ್ ಆರ್ಡರ್ ಇಷ್ಯೂ ಮಾಡಿ ಕೈ ಕಟ್ಟಿಸಿಕೊಳ್ಳಬೇಕೆಂಬ ಅತುರವಿಲ್ಲ. 18 ಲಕ್ಷಕ್ಕೆ ಕಡಮೆ ಕೊಡುತ್ತಾರೆ ಎನ್ನುವಂಥದ್ದು ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು

ವೆರಿಫೈ ಮಾಡಬೇಕಾಗುತ್ತದೆ. ಅವರು ಕಾಪಿ ಕಳಿಸಿದ್ದಾರೆ. ಅದರಲ್ಲಿ ಇರುವಂತೆ ಬರೆದಿರಬಹುದು ಇಲ್ಲದೆ ಇದ್ದರೆ ಕಾಪಿ ಹೇಗೆ ಬರುತ್ತದೆ ಎಂದು ತಿಳಿದುಕೊಂಡು ಆರ್ಡರ್ ಮಾಡದೆ ಫೈಲನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೇನೆ. ಒಂದು ವೇಳೆ 16 ಲಕ್ಷಕ್ಕೆ ಅವರು ಕೊಡುತ್ತೇವೆಂದರೆ 18 ಲಕ್ಷಕ್ಕೆ ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಅವರನ್ನು ಕೇಳಿದರೆ 18 ಲಕ್ಷಕ್ಕೆ ಕೆಳಗೆ ಕೊಡುವುದಕ್ಕಾಗುವುದಿಲ್ಲ, ಬೇಕಾದರೆ ತೆಗೆದುಕೊಳ್ಳಿ, ಇಲ್ಲದೆ ಹೋದರೆ ಬಿಡಿ, ಕಡಮೆಗ ಕೊಡುವುದಕ್ಕೆ ಇಷ್ಟವಿಲ್ಲ ಎಂದು ತಿಳಿಸಿದಾಗ ನಾವು ವಿಚಾರ ಮಾಡಿ, ನೆಗೋಷಿಯೇಟ್ ಮಾಡಿ ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ತಿಳಿದುಕೊಳ್ಳಿ ಎಂದು ನಮ್ಮ ಸೆಕ್ರೆಟರಿಯವರನ್ನು ಕಳಿಸಿದೆವು. ಇಪ್ಪೊತ್ತಿಗೂ ಅವರು 18 ಲಕ್ಷಕ್ಕೆ ಕಡಮೆ ಕೊಡುವುದಕ್ಕೆ ಸಾಧ್ಯವಿಲ್ಲ, ಬೇಕಾದರೆ ತೆಗೆದುಕೊಳ್ಳಿ ಇಲ್ಲದೆ ಹೋದರೆ ಬಿಡಿ ಎಂದು ಹೇಳಿದ್ದಾರೆ.

11-30 A.M.

ಇನ್ನು ಪಿ.ಡಬ್ಲ್ಯು.ಡಿ. ವ್ಯಾಲ್ಯುಯೇಷನ್ ವಿಚಾರ ಹೇಳುತ್ತೇನೆ. ಶ್ರೀ ನಂಜೇ ಗೌಡರು ಎಷ್ಟು ಬೆಲೆ ಕಟ್ಟಿದ್ದಾರೆ ಎಂದು ಮುಂತಾಗಿ ಅನೇಕ ಪ್ರಶ್ನೆಗಳನ್ನು ಹಾಕಿದ್ದಾರೆ. ಅದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಸಾಧ್ಯವಾಗದೆ ಇರಬಹುದು. ಆದರೆ ಪಿ.ಡಬ್ಲ್ಯುಡಿ. ವ್ಯಾಲ್ಯುಯೇಷನ್ ನಾನು ಹೇಳುತ್ತೇನೆ, ಇದರಲ್ಲಿ ಮುಚ್ಚುಮರೆಯಿಲ್ಲ, ಚೀಫ್ ಇಂಜಿನಿಯರು ಮತ್ತು ಎಗ್ಸಿಕ್ಯುಟಿವ್ ಇಂಜಿನಿಯರು ಬೆಲೆ ಕಟ್ಟಿದ್ದಾರೆ. ಅವರಿಬ್ಬರು ವ್ಯಾಲ್ಯುಯೇಷನ್ ಮಾಡಿರುವುದರಲ್ಲಿ ವ್ಯತ್ಯಾಸವಿದೆ. ಎಗ್ಸಿಕ್ಯುಟಿವ್ ಇಂಜಿನಿಯರು 18 ಲಕ್ಷ 55 ಸಾವಿರ ರೂಪಾಯಿಯೋ ಏನೋ ಬೆಲೆ ಕಟ್ಟಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಎಗ್ಸಿಕ್ಯುಟಿವ್ ಇಂಜಿನಿಯರ ಹೆಸರೇನು ?

ಶ್ರೀ ವೀರೇಂದ್ರ ಪಾಟೀಲ್.—ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಯಾವ ತಾರೀಖು ಅಂದಾಜು ಮಾಡಿದರು ? ಯಾರು ಮಾಡಿದರು ?

ಶ್ರೀ ವೀರೇಂದ್ರ ಪಾಟೀಲ್.—ಹೇಳುತ್ತೇನೆ. 18,55,500 ರೂಪಾಯಿಗಳು ಎಂದು ಎಗ್ಸಿಕ್ಯುಟಿವ್ ಇಂಜಿನಿಯರು ವ್ಯಾಲ್ಯುಯೇಷನ್ ಮಾಡಿ ಕಳುಹಿಸಿದ್ದಾರೆ. ಬಹುಶಃ ಅದನ್ನು ಅವರು 1966ರಲ್ಲಿ ಮಾಡಿರುವ ಹಾಗೆ ಕಾಣುತ್ತದೆ. ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರು ಮತ್ತು ಅಸಿಸ್ಟೆಂಟ್ ಇಂಜಿನಿಯರು ಒಂದು ತಾರೀಖು ಹಾಕಿದ್ದಾರೆ. ಅದುದರಿಂದ ಬಹುಶಃ 1966ರಲ್ಲಿ ವ್ಯಾಲ್ಯುಯೇಷನ್ ಮಾಡಿದ್ದಾರೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅಸಿಸ್ಟೆಂಟ್ ಇಂಜಿನಿಯರು ಮಾಡಿರುವುದು ಎರಡು ತಾರೀಖು ಇದ್ದರೆ ಅದನ್ನೂ ಹೇಳಿ.

ಶ್ರೀ ವೀರೇಂದ್ರ ಪಾಟೀಲ್.—ಹೇಳುತ್ತೇನೆ. ತಾರೀಖು ಸರಿಯಾಗಿ ಗೊತ್ತಾಗುವುದಿಲ್ಲ, ಫೈಲಿನಲ್ಲಿರುವ ಪ್ರಕಾರ 12ನೇ ಮೇ 1966ರಲ್ಲಿ ಜೂನಿಯರ್ ಇಂಜಿನಿಯರು ರುಜು ಮಾಡಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರು ರುಜುಮಾಡಿದ್ದಾರೆ, ತಾರೀಖು ಹಾಕಿಲ್ಲ. ಎಗ್ಸಿಕ್ಯುಟಿವ್ ಇಂಜಿನಿಯರು ಶ್ರೀ ಚಿಕ್ಕೋಡಿ ಎನ್ನುವವರಿದ್ದರು, ಅವರಿಗೆ ಬಹುಶಃ ಪ್ರಮೋಷನ್ ಆಗಿ ನೂಪರಿಂಟೆಂಡಿಂಗ್ ಇಂಜಿನಿಯರಾಗಿದ್ದಾರೆ. 28ನೇ ಜೂನ್ 1967ರಲ್ಲಿ ಚೀಫ್ ಇಂಜಿನಿಯರು ವ್ಯಾಲ್ಯುಯೇಷನ್ ಮಾಡಿ ಕಳಿಸಿದ್ದಾರೆ, ಅವರು 13,40,923 ರೂಪಾಯಿಗಳಿಗೆ ಅಂದಾಜು ಮಾಡಿದ್ದಾರೆ. ಇಷ್ಟು ವ್ಯಾಲ್ಯುಯೇಷನ್ ಮಾಡಿ ಅವರು ಸರಕಾರಕ್ಕೆ ಕಾಗದ ಬರೆದಿದ್ದಾರೆ. ಅದನ್ನು ಹೇಳುತ್ತೇನೆ. ಈ ರೀತಿ ವ್ಯಾಲ್ಯುಯೇಷನ್ ಮಾಡಿದ ಮೇಲೆ ನಾನು ಅವರ ಜೊತೆ ಮಾತುಕತೆ ಆಡುವುದಕ್ಕೆ ಮುಂಚೆ, 22ನೇ ಸೆಪ್ಟೆಂಬರ್ 1967ರಲ್ಲಿ ಇನ್ನೊಂದು ಕಾಗದ ಬರೆದಿದ್ದಾರೆ.

Sri H. SIDDAVEERAPPA.—Is it Mr. Basanna ?

Sri VEERENDRA PATIL.—Yes. I will read the subsequent letter of the Chief Engineer. This letter was written on 22nd September 1967. The extract of that is as follows :

"……However it may be stated that the property is situated on the National High Way (Bangalore-Bellary Road) and

(SRI VEERENDRA PATIL)

is in the vicinity of the Palace Orchard layout (Sadashivanagar Lay Out) which is considered to be an elite locality. If the prevailing conditions are taken into consideration and the building is required to meet the immediate requirements of the Government, the Government may suitable negotiate. In this connection it may not be out of place to mention that the valuation of the allied properties was fixed by this office at Rs. 13.44 lakhs. However, Government taking into consideration the situation of the property and its vicinity to Vidhana Soudha may offer a higher price.

We are agreeable to offer a higher price."

SRI H. SIDDAVEERAPPA.—We are not here to blame the Government. We want you to get rid of this blemish. We want you to clear the clouds. We want to know why the Chief Engineer has written a second letter for negotiation. How is it he has changed his mind and written that letter ?

ಶ್ರೀ ವೀರೇಂದ್ರ ಪಾಟೀಲ್.—ಈ ಮಧ್ಯೆ ಅವರು ಕೊಡುವುದಕ್ಕೆ ತಯಾರಿಲ್ಲ ಎಂದು ಹೇಳಿದರು. ಆಗ ಮತ್ತೊಂದು ಕಾಗದ ಬರದು ಅಲ್ಲಿನ ಪರಿಸ್ಥಿತಿ ನೋಡಿ 14 ಲಕ್ಷವೋ ಏನೋ ಮಾಡಿದ್ದಾರೆ. ಸರಕಾರಕ್ಕೆ ಬೇಕಾದರೆ ನೆಗೋಷಿಯೇಟ್ ಮಾಡಬಹುದು, ಹೈವೇನಲ್ಲಿದೆ, ಹಿಂದೆ ವ್ಯಾಲ್ಯುಯೇಷನ್ ಮಾಡಿರುವುದಕ್ಕಿಂತ ಹೆಚ್ಚಾದರೂ ತಗೆದುಕೊಳ್ಳಬೇಕೆಂದು ಪ್ರಯತ್ನ ನಡೆಯಿತು. ಆ ಕಟ್ಟಡದ ಅವಶ್ಯಕತೆ ಇದ್ದರೆ ನೆಗೋಷಿಯೇಟ್ ಮಾಡಬಹುದು ಎಂದು ತಿಳಿಸಿದರು. ಪಿ. ಡಬ್ಲ್ಯು. ಡಿ. ಯವರು ವ್ಯಾಲ್ಯುಯೇಷನ್ ಮಾಡಿದಾಗ ಹೆಚ್ಚು ಕಡಮೆ ಮಾಡುವಾರದು, ಅಷ್ಟಕ್ಕೇ ತಗೆದು ಕೊಳ್ಳಬೇಕು ಎಂದು ಹೇಳಬಹುದು. ಆದರೆ ಅವಶ್ಯಕತೆ ಬಿದ್ದಾಗ ನೆಗೋಷಿಯೇಷನ್ ಮಾಡಬೇಕು, ಇದನ್ನು ಮೊದಲೇನೇ ಹೇಳುತ್ತಿದ್ದೆ. ಯಾವಾಗ ಅವಶ್ಯಕತೆ ಬಿದ್ದರೂ ನೆಗೋಷಿಯೇಟ್ ಮಾಡಿ ತೆಗೆದ ಕೊಂಡಿದ್ದಾರೆ ಎಂದು ಹೇಳಬಹುದೇ ಹೊರತು ಪಿ. ಡಬ್ಲ್ಯು. ಡಿ. ವ್ಯಾಲ್ಯುಯೇಷನ್ ಮೇಲೆ ತೆಗೆದುಕೊಂಡಿಲ್ಲ. ಅವಶ್ಯಕತೆ ಬಿದ್ದಾಗ ನೆಗೋಷಿಯೇಟ್ ಮಾಡಬೇಕು. ಯಾವುದೇ ಒಂದು ಕಟ್ಟಡವನ್ನು ಬಾಡಿಗೆಯುಮೇಲೆ ತೆಗೆದುಕೊಳ್ಳುವಾಗ ಪಿ ಡಬ್ಲ್ಯು ಡಿ ಯ ವ್ಯಾಲ್ಯುಯೇಷನ್ ಮಾಡುವುದುಂಟು. ಮಾರಬೇಕು, ಬಾಡಿಗೆಗೆ ಕೊಡುವುದಿಲ್ಲ ಎಂದು ಹೇಳಿದಾಗ ಅದನ್ನೂ ವಿಚಾರ ಮಾಡಬೇಕು. ಆದರೆ ಮಾಲೀಕರು ಹೇಳಿದಂತೆ ಕ್ರಯ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಪಿ. ಡಬ್ಲ್ಯು. ಡಿ. ಯವರು ವ್ಯಾಲ್ಯುಯೇಷನ್ ಮಾಡುವುದು ನಮಗೆ ಒಂದು ಗೈಡೆನ್ಸ್. ಇಂಜಿನಿಯರಿಂಗ್ ಇರಾಖೆಯವರನ್ನು ಕೇಳಿದಾಗ ಎಗ್ಸಿಕ್ಯುಟಿವ್ ಇಂಜಿನಿಯರು ಒಂದು ವ್ಯಾಲ್ಯುಯೇಷನ್, ಚೀಫ್ ಇಂಜಿನಿಯರು ಒಂದು ವ್ಯಾಲ್ಯುಯೇಷನ್ ಕೊಟ್ಟಿದ್ದಾರೆ. ಅವರು ಹೇಳಿರುವ ಪ್ರಕಾರ ನೆಗೋಷಿಯೇಟ್ ಮಾಡಿ ಹೆಚ್ಚು ಕೊಟ್ಟು ತೆಗೆದುಕೊಳ್ಳಬಹುದು ಎಂದು ಹೇಳಿರುವ ಪ್ರಕಾರ ನೆಗೋಷಿಯೇಟ್ ಮಾಡಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ನೆಗೋಷಿಯೇಟ್ ಮಾಡಿ ಹೆಚ್ಚು ಕೊಡಬಹುದು ಎಂದು ಎಲ್ಲ ಹೇಳಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಅವರು ತಿಳಿಸಿರುವುದರ ಅರ್ಥವೇನು ? ಇಂಜಿನಿಯರುಗಳು ಪರಿಶೀಲಿಸಿ 18 ಲಕ್ಷ 55 ಸಾವಿರ ರೂಪಾಯಿ ವ್ಯಾಲ್ಯುಯೇಷನ್ ಎಗ್ಸಿಕ್ಯುಟಿವ್ ಇಂಜಿನಿಯರೂ, 13 ಲಕ್ಷ 44 ಸಾವಿರ ರೂಪಾಯಿಗಳ ವ್ಯಾಲ್ಯುಯೇಷನ್ನನ್ನು ಚೀಫ್ ಇಂಜಿನಿಯರೂ ಕೊಟ್ಟಿದ್ದಾರೆ. 18 ಲಕ್ಷ ರೂಪಾಯಿಗಳಿಗೆ ಕಡಮೆ ಕೊಡುವುದಿಲ್ಲವೆಂದು ಚೀಫ್ ಇಂಜಿನಿಯರಿಗೆ ಗೊತ್ತು. ಈ ಪರಿಸ್ಥಿತಿಯಲ್ಲಿ ನೆಗೋಷಿಯೇಟ್ ಮಾಡಿ ಎಂದು ಅವರು ತಿಳಿಸಿದರೆ ಅದರ ಅರ್ಥವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಆಧಾರದಮೇಲೆ ವ್ಯಾಲ್ಯುಯೇಷನ್ ಮಾಡಿದ್ದಾರೆ? ಅವರದೇ ಕೊನೆಯ ಮಾತಲ್ಲ. ನಾವು ವರದಿಯನ್ನು ಪೂರ್ಣವಾಗಿ ನೋಡಬೇಕಾಗುತ್ತದೆ. ವ್ಯಾಲ್ಯುಯೇಷನ್ ವರದಿಯನ್ನು ಸಭೆಯ ಮುಂದೆ ಇಡಬೇಕು. 22-9-1967ರಲ್ಲಿ ಬರೆದಿರುವ ಕಾಗದವನ್ನೂ ಸಭೆಯ ಮುಂದಿಡಬೇಕು. ತಾವು ಕೇಳಿದಮೇಲೆ ಚೀಫ್ ಇಂಜಿನಿಯರು ಮತ್ತೆ ಬರೆದರೇ, ಅಥವಾ ಅವರಾಗಿಯೇ ಬರೆದರೇ ಎಂಬುದು ತಿಳಿಯಬೇಕು. ಇದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಚೀಫ್ ಇಂಜಿನಿಯರು ಒಂದು ವ್ಯಾಲ್ಯುಯೇಷನ್ ಮಾಡಿ ಲೆಟರ್ ಬರೆದರು, ಅನಂತರ ಅದರ ಕಂಟಿನ್ಯೂಯೇಷನ್ ಆಗಿ ಇನ್ನೊಂದು ಲೆಟರ್ ಕಳುಹಿಸಿದ್ದಾರೆ. ಮೊದಲನೆ ವ್ಯಾಲ್ಯುಯೇಷನ್ ಆದಮೇಲೆ ಒಂದುವೇಳೆ ಅವಶ್ಯಕತೆ ಇದ್ದರೆ ನೇಗೊಷಿಯೇಟ್ ಮಾಡಿ ತೆಗೆದುಕೊಳ್ಳಿರಿ ಎಂದು ಇನ್ನೊಂದು ಲೆಟರ್‌ನಲ್ಲಿ ಬರೆದರು.

ಶ್ರೀ ಎಸ್. ಶಿವಪ್ಪ.—ಜೂನ್ ತಿಂಗಳಲ್ಲಿ 1967ನೇ ಇಸವಿಯಲ್ಲಿ 13.4 ಲಕ್ಷ ರೂಪಾಯಿ ಚೀಫ್ ಇಂಜಿನಿಯರು ಎಸ್ಟಿಮೇಟ್ ಮಾಡಿದರು. ಆಗಸ್ಟ್ ತಿಂಗಳಿನಲ್ಲಿ ನಾನು ಈ ವಿಚಾರ ಬರದೆ. ಇದರೊಳಗೆ ಒಳಗೊಳಗೇ ಏನೋ ನಡೆಯುತ್ತಾ ಇದೆ. 18—20 ಲಕ್ಷ ರೂಪಾಯಿನ ವ್ಯವಹಾರ ನಡೆಸುತ್ತಾ ಇದ್ದೀರಿ, ಇದು ಯಾರ ದುಡ್ಡು ಅಂತ ಚರ್ಚೆ ಮಾಡಿದಮೇಲೆ ನೀವು ಅವರಿಗೆ ಶತ್ರು ಬರೆದಿರಬಹುದು.

ಶ್ರೀ ವೀರೇಂದ್ರ ಪಾಟೀಲ್.—ಅದೇ ವಿಚಾರ ನಾನು ಹೇಳುತ್ತಾ ಇದ್ದೇನೆ. ನಮ್ಮ ಹತ್ತಿರ ಎಕ್ಸಿಕ್ಯೂಟೀವ್ ಇಂಜಿನಿಯರ ವ್ಯಾಲ್ಯುಯೇಷನ್ ರಿಪೋರ್ಟ್ ನೇರವಾಗಿ ಬಂದು, 15 ಲಕ್ಷ ರೂಪಾಯಿಗಳ ಮೇರೆ ವ್ಯಾಲ್ಯುಯೇಷನ್ ಆಗುವಂತಹ ಸಂದರ್ಭವಿತ್ತು. ಚೀಫ್ ಇಂಜಿನಿಯರ ಹತ್ತಿರ ಆ ವ್ಯಾಲ್ಯುಯೇಷನ್ ಹೋದಾಗ ಏನಾಗುತ್ತದೆಯೋ, ಅವರೂಕೂಡ ಆ ವ್ಯಾಲ್ಯುಯೇಷನ್‌ನ್ನು ಸರ್ಚಫೈ ಮಾಡುತ್ತಾರೆಯೇ ಅಥವಾ ಪ್ರತ್ಯೇಕವಾದ ವ್ಯಾಲ್ಯುಯೇಷನ್ ಮಾಡುತ್ತಾರೆಯೆ ಎಂಬುದು ನಮಗೆ ಗೊತ್ತಿರಲಿಲ್ಲ. ಅವರನ್ನು ವಿಚಾರ ಮಾಡಬೇಕಾದ ಅವಶ್ಯಕತೆ ಇರುವುದರಿಂದ ನೀವು ವ್ಯಾಲ್ಯುಯೇಷನ್ ಮಾಡಿ ಕಳುಹಿಸಿ ಎಂಬ ಮಾತನ್ನು ಚೀಫ್ ಇಂಜಿನಿಯರಿಗೆ ಹೇಳಿದ್ದೇವೆ. ಆ ರೀತಿಯಿಂದ ಅವರು ವ್ಯಾಲ್ಯುಯೇಷನ್ ಮಾಡಿ ನಮಗೆ ಕಳುಹಿಸಿಕೊಟ್ಟರು. ಅನಂತರ ಲೆಟರ್ ಬರೆದು ನೆಗೋಷಿಯೇಟ್ ಮಾಡಬಹುದು ಅಂತ ಹೇಳಿದ್ದಾರೆ. ಅದಕ್ಕೆ ಮಹತ್ವ ಏನೂ ಬರುವ ಹಾಗಿಲ್ಲ ಅಂತ ಅನ್ನುವುದನ್ನು ಈಗಾಗಲೇ ಹೇಳಿದ್ದೇನೆ. ಪಿ. ಡಬ್ಲ್ಯೂ. ಡಿ. ವ್ಯಾಲ್ಯುಯೇಷನ್, ಏನಿದೆ ಅದು ಒಂದು ಗೈಡೆನ್ಸ್. ಅವರು ಹೇಳಿದ್ದೇ ಒಂದು ಫೈನಲ್ ವರ್ಡ್ ಅಲ್ಲ, ಅವರು ಮಾಡಿದ್ದಕ್ಕೆ ಒಂದು ಪೈ ಹೆಚ್ಚು ಕೊಡುವ ಹಾಗಿಲ್ಲ ಅಂತ ಅಲ್ಲ, ಅದಕ್ಕಾಗಿಯೇ ಪದೇ ಪದೇ ಹೇಳಿದ್ದೇನೆ, ನೆಗೋಷಿಯೇಟ್ ಮಾಡಿ ತೆಗೆದುಕೊಂಡಿದ್ದೇವೆ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಭಾಷಣದಲ್ಲಿ ಮೊದಲನಿಂದ ಕೊನೆಯವರೆಗೂ ನಾವೇನೂ ಮಾಡಿಲ್ಲ ಅಧಿಕಾರಿಗಳು ಹೇಗೆ ಹೇಳಿದ್ದಾರೋ ಹಾಗೆ ಮಾಡಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಪಿ. ಡಬ್ಲ್ಯೂ. ಡಿ. ಸೆಕ್ರೆಟರಿಯವರಿಗೆ ಕಳುಹಿಸಿದ್ದೇವೆ. ನೆಗೋಷಿಯೇಟ್ ಮಾಡಿದ್ದೇವೆ, ನಮಗೆ ಬಂದ ವರದಿಯನ್ನು ಪರಿಶೀಲನೆ ಮಾಡಿ ಆದರಮೇರೆ ನಿರ್ಣಯ ಮಾಡಿದ್ದೇವೆ ಎಂದು ಹೇಳಿದ್ದೇನೆ. ಅಧಿಕಾರಿಗಳು ಯಾವ ರೀತಿಯಿಂದ ವ್ಯಾಲ್ಯುಯೇಷನ್ ಮಾಡಿದ್ದಾರೆ. ಅದೇ ರೀತಿ ಕೊಟ್ಟಿದ್ದೇವೆ ಎಂದು ನಾನು ಎಲ್ಲೂ ಹೇಳಿಲ್ಲ, ಬೇಕಾದರೆ ಇನ್ನೊಂದು ಸಲ ಓದಿ ಮುಂದಿನ ಸಲ ಈ ವಿಷಯವನ್ನು ಪ್ರಸ್ತಾಪಮಾಡಿ.

ಶ್ರೀ ಎಚ್. ಎನ್. ನಂಜೇಗೌಡ (ನಂಜನಗೂಡು).—ಎಕ್ಸಿಕ್ಯೂಟೀವ್ ಇಂಜಿನಿಯರು ವ್ಯಾಲ್ಯುಯೇಷನ್ ಹಾಕಿದ್ದು 1966ರಲ್ಲಿ ಚೀಫ್ ಇಂಜಿನಿಯರು ವ್ಯಾಲ್ಯುಯೇಷನ್ ಹಾಕಿರುವುದು 1967ರಲ್ಲಿ. ನಿಮಗೆ ಗೊತ್ತಿರುವ ಹಾಗೆ ದಿನ ದಿನಕ್ಕೆ ರೇಟ್ ಹೆಚ್ಚಾಗುತ್ತಾ ಬಂದಿದೆ.

Sri M. NAGAPPA (Raichur).—Sir, are we discussing the very Privilege Motion itself?

ಈ ರೀತಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೇಗೆ?

We are deviating from the rules and discussing the very subject, as if the Privilege Committee has submitted a Report, on the Floor of this House. We need not go into the niceties of the case. Otherwise, every body must have an opportunity to speech on the subject.

Mr. DEPUTY SPEAKER.—I have given an opportunity to the Hon'ble Minister to explain.

Sri M. NAGAPPA.—It is being discussed as if every letter, every correspondence and all documents have been placed on the Table of this House. These are all documents to be placed before the Privilege Committee.

Sri DIGAMBARA RAO B. KALMANKAR.—Sir, I rise to a point of Order. At this stage, can the Hon'ble Minister go on giving all the details and are they to be considered? The Hon'ble House is to see whether there is a prima facie case or not. A definite question was posed by my friend, Sri Siddaveerappa as to whether the Chief Engineer had given his report of the valuation as Rs. 13 lakhs and odd. To that question, the Hon'ble Minister has replied that on 28th July 1967 he made the valuation according to which it comes to Rs. 13 lakhs and odd. That is sufficient. If we go beyond this, that would mean that this House has usurped the jurisdiction of the Privilege Committee, to which this matter is likely to be referred. Prima facie, there is a case of breach of privilege. But, we are deviating from the procedure. Now, I think, this much is sufficient to come to the conclusion that there is a prima facie case as made out by the hon'ble Member Sri Siddaveerappa. Therefore, no more discussion may be allowed to take place and no more statement is required to arrive at a decision.

Mr. DEPUTY SPEAKER.—The Hon'ble Minister has given the explanation.

† Sri B. P. GANGADHAR.—Sir, I rise to a point of order under Rule 311. Sir, we are aware and fully confronted with the facts that a Privilege Motion is moved and the hon'ble Member Sri Siddaveerappa has elaborately discussed it. And, the Hon'ble Minister is replying to it now. It is for the Committee to get all the necessary details about the date, the person who examined it and the person who valued it, etc. If we go on putting questions for anything and everything now and then, he may not be able to complete his reply. Let the Hon'ble Minister complete his reply, and then, the Speaker can come to a conclusion whether there is a prima facie case or not. We may allow the Hon'ble Minister to make a statement, because he has understood the whole thing—he was noting down all the questions as I could see.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಒಂದು ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಕೇಳಿದ್ದಾರೆ ಏನೆಂದರೆ ಇದು ಕ್ಯಾಬಿನೆಟ್‌ಗೆ ಹೋಗಿತ್ತು. ಕ್ಯಾಬಿನೆಟ್‌ನಲ್ಲಿ ಚೀಫ್ ಇಂಜಿನಿಯರು, ಎಕ್ಸಿಕ್ಯೂಟಿವ್ ಇಂಜಿನಿಯರು ಯಾರು ವ್ಯಾಲ್ಯುಯೇಷನ್ ಮಾಡಿದ್ದಾರೋ ಅವರು ಇರಲಿಲ್ಲ, ಇರುವುದಿಲ್ಲ, ಯಾರಿಗೋ ಒಬ್ಬರು ಇಬ್ಬರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಂಡಿದ್ದಾರೆ ಅಂತ ಹೇಳಿ ಅವರ ಮನಸ್ಸಿನಲ್ಲಿ ಇದ್ದ ಹಾಗೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ವಿಷಯ ಬಂದಿರಲಿಕ್ಕೇ ಬೇಕು. All these gentlemen are criminally and grossly negligent; they have not safeguarded the interests of the State.

ಶ್ರೀ ವೀರೇಂದ್ರ ಪಾಟೀಲ್.—ಈ ವಿಷಯದಲ್ಲಿ ಹೇಳಬೇಕಾದರೆ ಪ್ರತಿಯೊಂದೂ ಪ್ರೊಸೀಜರ್ ಪ್ರಕಾರ ಏನು ಮಾಡಬೇಕಾಗಿದೆಯೋ ಆ ರೀತಿ ಮಾಡುವುದರಿಂದ—ಕ್ಯಾಬಿನೆಟ್ ಮುಂದೆ ನೋಟಿಂಗ್ ಇರುತ್ತದೆ ಅದನ್ನೆಲ್ಲಾ ಹೇಳುವುದು ಸಮಂಜಸವಲ್ಲ, ಹೇಳುವುದಕ್ಕೆ ಸಾಧ್ಯವೂ ಇಲ್ಲ ಇಷ್ಟು ಮಾತ್ರ ಹೇಳಬಹುದು, 18 ಲಕ್ಷ ರೂಪಾಯಿನ ಒಂದು ಬಿಲ್ಡಿಂಗ್‌ನ್ನು ಸರ್ಕಾರದವರು ಖರೀದಿ ಮಾಡಬೇಕಾಗಿದ್ದರೆ, ತೆಗೆದುಕೊಳ್ಳಬೇಕಾಗಿದ್ದರೆ, ಏನು ಒಂದು ಪ್ರೊಸೀಜರ್ ಇದೆಯೋ ಅದನ್ನೆಲ್ಲಾ ಪೂರ್ತಿ ಮಾಡಿದ್ದೇವೆ, ಅದರಲ್ಲಿ ಚ್ಯುತಿ ಮಾಡಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗ ಅನೇಕ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳುತ್ತಾರೆ. ಕೆಲವು ಪ್ರಶ್ನೆಗಳಿಗೆ ನಮ್ಮಲ್ಲಿ ಮಾಹಿತಿ ಇರುತ್ತದೆ, ಇನ್ನು ಕೆಲವು ಪ್ರಶ್ನೆಗಳಿಗೆ ಮಾಹಿತಿ ಇರುವುದಿಲ್ಲ. ಇಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ಹೇಳಲಿಲ್ಲವೆಂದು ಅದಕ್ಕೆ ಪ್ರಿವಿಲೆಜ್ ಮೋಷನ್ ತಂದು ಸಪ್ರೆಸ್ ಮಾಡಿದ್ದಾರೆಂದು ಹೇಳಿದರೆ ಅಂಥಾ ಪ್ರಸಂಗ ಇಲ್ಲ ಏನೂ ಇಲ್ಲ. ಇಲ್ಲಿ ಆ ರೀತಿ ನಡೆದಿದ್ದೂ ಯಾವುದೂ ಇಲ್ಲ. ಈ ಮನೆಯಲ್ಲಿ ಈ ರೀತಿ ಸಪ್ರೆಸ್ ಮಾಡಬೇಕೆಂಬ ವಿಚಾರ ಇಲ್ಲಯವರೆಗೂ ಬರಲಿಲ್ಲ. ನನ್ನಲ್ಲಿ ಏನು ಮಾಹಿತಿ ಇರುತ್ತದೋ ಅದನ್ನು ಇಲ್ಲಿ ಹೇಳುವುದಕ್ಕೆ ತಯಾರಾಗಿರುತ್ತೇನೆ. ಇದರಲ್ಲಿ ಈ ಪ್ರಶ್ನೆ ಮುಖ್ಯವಾಗಿ ಏಕೆ ಬರಲಿಲ್ಲ ಅಂದರೆ ಮೊದಲಿನಿಂದಲೂ ಅದನ್ನು ಖರೀದಿಮಾಡಿದ್ದಾರೆಂಬ ಪ್ರಶ್ನೆ ಬರಲಿಲ್ಲ. ಏನೋ ಡೆಲಿಬರೇಟಾಗಿ ಇದನ್ನು ಮುಚ್ಚಬೇಕು, ಸಪ್ರೆಸ್ ಮಾಡಬೇಕೆಂಬ ವಿಚಾರ ಏನೂ ಇಲ್ಲವೆಂದು ಇನ್ನೊಮ್ಮೆ ಸ್ಪಷ್ಟಪಡಿಸುತ್ತೇನೆ.

Sri H. SIDDAVEERAPPA.—Before you give your ruling I would like to know from the Hon'ble Minister, one information. Having heard all that he has said, and as the Government Order is not yet issued, may I very earnestly request you, in the interest of your own Cabinet, not to finalise the Government Order, because if you finalise it you will be doing so under suspicious circumstances, for which there may or may not be any basis. Now, we feel there is a basis for suspicion after having seen the recommendations of the Chief Engineer. Therefore, may I request you to see that this transaction is dropped and you do not proceed further? As you have not issued the Government Order yet, even now I request the Government to examine and see that the matter is not pursued in the interest of both the Congress organisation and the Congress Ministry.

ಶ್ರೀ ವೀರೇಂದ್ರ ಪಾಟೀಲ್.—ಒಂದು ನಿರ್ಣಯವನ್ನು ಈಗಾಗಲೇ ತೆಗೆದುಕೊಂಡಿದ್ದೇವೆಂಬ ಮಾತನ್ನು ಹೇಳಿದ್ದೇನೆ. ಈ ನಿರ್ಣಯವನ್ನು ನಾವು ತೆಗೆದುಕೊಂಡಿದ್ದು ಅವರಿಗೆ ಗೊತ್ತಾಗಿದೆ. ಅವರಿಗೆ ನಾವು ತೆಗೆದುಕೊಳ್ಳುತ್ತೇವೆಂದು ನೂಚನೆ ಕೊಡುವುದಕ್ಕೆ ಫಾರ್ಮಾಲಿಟೀಸ್ ಇನ್ನೂ ಪೂರ್ತಿಯಾಗಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್ ಅವರು ಅವರೇ ಅದನ್ನು 16 ಲಕ್ಷ ರೂಪಾಯಿಗಳಿಗೆ ಕೊಡುತ್ತೇನೆಂದು ಬರೆದಿದ್ದಾರೆ, ಅದಕ್ಕಾಗಿ 18 ಲಕ್ಷ ರೂಪಾಯಿಗಳನ್ನು ಏಕೆ ಕೊಡುತ್ತೀರಿ, ಎಂಬುದಾಗಿ ಒಂದು ಪತ್ರ ನನಗೆ (ಬಂದಿದೆಯೆಂದು) ಹೇಳಿದರು. ಆ ಪತ್ರವನ್ನು ನಾನು ತರಿಸಿಕೊಂಡು ನೋಡುತ್ತೇನೆ. ಅವರೇ 16 ಲಕ್ಷ ರೂಪಾಯಿಗಳಿಗೆ ಅದನ್ನು ಕೊಡುತ್ತೇನೆ ಎಂಬುದಾಗಿ ಭರವಸೆ ಕೊಟ್ಟಾಗ, 18 ಲಕ್ಷ ರೂಪಾಯಿಗಳನ್ನು ಅವರು ಪುನಃ ಕೇಳುವಂಥಾದ್ದು ಅನ್ಯಾಯವೆಂದು ನಾನೇ ಪರ್ಸನಲ್ಲಾಗಿ ಫೀಲ್ ಮಾಡುತ್ತೇನೆ. ಆ ರೀತಿ ಭರವಸೆ ಅವರು ಕೊಟ್ಟ ತಕ್ಷಣವೇ, ಅದೇ ರಿಯಲ್, ಅದನ್ನು ಅಪ್ಪಕ್ಕೆ ಕೊಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಅದನ್ನು ಪರಿಶೀಲನೆ ಮಾಡಿದಮೇಲೆ ಒಂದು ವೇಳೆ ಆ ರೀತಿಯಲ್ಲಿ ಪತ್ರ ಬರೆದಿದ್ದರೆ ಅಥವಾ ಆ ಪತ್ರ ಬಾರದೇ ಇದ್ದರೆ, ಅದರ ಪರಿಸ್ಥಿತಿಯೇ ಬೇರೆಯಾಗುತ್ತದೆ. ಒಟ್ಟಿನಲ್ಲಿ ಇದನ್ನು ಪರಿಶೀಲನೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

†ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹೇಳಿದಂಥ ಹೇಳಿಕೆ ಪ್ರಕಾರ ಈ ಸಭೆ ಸಮಾಧಾನಪಡಬೇಕಾದ ಪರಿಸ್ಥಿತಿಯಲ್ಲಿಲ್ಲ. ಈ ವಿಷಯವನ್ನು ಆಗಸ್ಟ್ 1ನೇ ತಾರೀಖಿನ ದಿವಸವೇ ಸರ್ಕಾರಕ್ಕೆ ಎಚ್ಚರಿಕೆ ರೂಪದಲ್ಲಿ ಹೇಳಿದ್ದೇನೆ. ಚೀಫ್ ಇಂಜನಿಯರ್ ಜೂನ್ ತಿಂಗಳಲ್ಲಿ 13 ಲಕ್ಷ ಬಿಲ್ಲರೆ ಎಂದು ಎಸ್ಟಿಮೇಟ್ ಮಾಡಿದಮೇಲೆ ಈ ವಿಚಾರ ಗೊತ್ತಾಯಿತು. ಈ ಸರ್ಕಾರದಲ್ಲಿ ಕೆಲವು

(ಶ್ರೀ ಎಸ್. ಶಿವಪ್ಪ)

ಮಂತ್ರಿಗಳ ಪ್ರಭಾವದಿಂದ ತಿರುವಾಂಕೂರು ಮಹಾರಾಜರ ಅರಮನೆಯನ್ನು 18 ಲಕ್ಷ ರೂಪಾಯಿಗಳಿಗೆ ಖರೀದಿಮಾಡಲು ಹೊರಟಿದ್ದಾರೆ. ಈ ವಿಚಾರವಾಗಿ ನಾನು ಆಗಸ್ಟ್ ಒಂದನೇ ತಾರೀಖಿನಲ್ಲಿ ನಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಈ ಖಜಾನೆ ಪೂರ್ತಿ ನಿಮ್ಮದು ಎಂಬುದಾಗಿ ಭಾವನೆ ಮಾಡಬೇಡಿ, ಯಾರೋ ಮಹಾರಾಜರ ಪ್ರೀತಿ, ವಿಶ್ವಾಸನಕ್ಕೋಸ್ಕರ ಈ ದೇಶದ ಖಜಾನೆಯ 18 ಲಕ್ಷ ರೂಪಾಯಿಗಳನ್ನು ಕೊಟ್ಟು ಆ ಅರಮನೆ ಕೊಂಡುಕೊಳ್ಳುವ ಪ್ರಮೇಯ ಏನಿದೆ, ಅದನ್ನು ಕೂಲಂಕಷವಾಗಿ ಪರಿಶೀಲನೆಮಾಡಬೇಕೆಂದು ಎಚ್ಚರಿಕೆ ಕೊಟ್ಟಮೇಲೆ ಚೀಫ್ ಇಂಜನಿಯರ್ ಅವರು ಅದಕ್ಕೆ 13 ಲಕ್ಷ ಚಿಲ್ಲರೆ ಎಂದು ಅಂದಾಜು ಮಾಡಿದ್ದರೆಂಬುದಾಗಿ ನಾನು ಹೇಳಿದ ಮಾರನೆಯ ದಿವಸವೇ ಒಂದು ವರದಿಯನ್ನು ತರಿಸಿದ್ದಾರೆ. ಇದು ಬಳ್ಳಾರಿ ರೋಡ್ ಅಂತಹ ಹೈರೋಡಿನಲ್ಲದೆ. ಸ್ವಲ್ಪ ಹೆಚ್ಚುಕಡಿಮೆ ವ್ಯಾಪಾರ ಮಾಡಿ ಎಂಬುದಾಗಿ ಪತ್ರ ಬರೆದಿದ್ದಾರೆ. ನಿಮ್ಮ ಚೀಫ್ ಇಂಜನಿಯರಿಗೆ ಅದು ಬಳ್ಳಾರಿ ಹೈರೋಡ್‌ನಲ್ಲಿ ಇದೆಯೆಂಬುದು ಜೂಜ್ ತಿಂಗಳಲ್ಲಿ ಗೊತ್ತಾಗಲಿಲ್ಲವೇ, ಎರಡನೆಯಸಾರಿ, ಬಣ್ಣದ ಕನ್ನಡಕ ಹಾಕಿಕೊಂಡಮೇಲೆ ಏನಾದರೂ ಅದು ಬಳ್ಳಾರಿ ಹೈರೋಡಿನಲ್ಲಿದೆಯೆಂದು ಗೊತ್ತಾಯಿತೇ ? ಎರಡು ತಿಂಗಳ ಹಿಂದೆ ಹೇಳಿದ್ದನ್ನು ಎರಡು ತಿಂಗಳು ಆದಮೇಲೆ ಬದಲಾಯಿಸಿಕೊಂಡು ಹೇಳುವ ಪ್ರಮೇಯವೇನು ? ಅಲ್ಲಿ ಹೈರೋಡ್ ಇದೆ. ಆದ್ದರಿಂದ ಮೊದಲಿನ ತೀರ್ಮಾನವನ್ನು ಬದಲಾವಣೆ ಮಾಡಬೇಕೆಂದು ಹೇಳಿರುವುದನ್ನು ನೋಡಿದರೆ, ಅದರಲ್ಲಿ ಖಂಡಿತವಾಗಿ ಇನ್ನೂ ಅನೇಕ ಒಳ್ಳೆಯ ವಿಚಾರಗಳು ಅಡಕವಾಗಿವೆ. ಅವನ್ನು ವಿಚಾರಮಾಡುವುದು ಅಗತ್ಯವಿದೆಯೆಂದು ನಾನು ಹೇಳುತ್ತೇನೆ. ಅದಕ್ಕೆ ಈಗಾಗಲೇ 18 ಲಕ್ಷ ರೂಪಾಯಿಗಳೆಂದು ತೀರ್ಮಾನಮಾಡಿದ್ದಾರೆಂದು ಹೇಳಿದ್ದಾರೆ. ಖಂಡಿತವಾಗಿ ಆ ರೀತಿ ಕೊಡಕೂಡದು. ಇದು ಬಹಳ ಅಪಹಾಸ್ಯಕರವಾಗಿದೆ. ಆದ್ದರಿಂದ ಇದನ್ನು ಎಸ್ಟಿಮೇಟ್ ಕಮಿಟಿಗೆ ರೆಫರ್‌ಮಾಡಿ. ನೀವು, ಗೃಹ ಮಂತ್ರಿಗಳು, ಲಾ ಸೆಕ್ರೆಟರಿ ಎಲ್ಲರೂ ಸೇರಿಕೊಂಡು ಇದನ್ನು ವಿಚಾರಮಾಡಿ ಈ ಸಭೆಗೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಪುನಃ ಒದಗಿಸಬೇಕೆಂದು ಹೇಳುತ್ತೇನೆ. ಈ ಕಾರ್ಯವನ್ನು ನಿಮ್ಮ ದೃಷ್ಟಿಯಿಂದಲೂ, ಶಾಸಕರ ದೃಷ್ಟಿಯಿಂದಲೂ ಜನತೆಯನ್ನು ಸಮಾಧಾನಪಡಿಸುವುದಕ್ಕೋಸ್ಕರ ಸರ್ಕಾರದವರು ಕೂಡಲೇ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಮುಂದೆ ರೂಲಿಂಗ್ ಕೊಡುತ್ತೇನೆ.

† ಶ್ರೀ ಎಸ್. ಚನ್ನಯ್ಯ.—ತಾವು ರೂಲಿಂಗ್ ಕೊಡುವ ಮುನ್ನ ನಾನು ಒಂದು ಮಾತನು ಹೇಳುತ್ತೇನೆ. ಈ ವಿಚಾರ ಚರ್ಚೆಯಾಗುವಾಗ ಅವರೇ ಅದನ್ನು ಹನ್ನೆರಡೂವರೆ ಅಥವಾ 13 ಲಕ್ಷ ರೂಪಾಯಿಗಳಿಗೆ ಸರ್ಕಾರಕ್ಕೆ ಕೊಡುವುದಕ್ಕೆ ತಯಾರಾಗಿದ್ದರು. ಆ ವಿಷಯ ಇವರಿಗೆ ಗೊತ್ತಿದ್ದೂ ಗೊತ್ತಿಲ್ಲವೆಂದು ಹೇಳಿದರು. ಈಗಲಾದರೂ ನಾನು ಒತ್ತಾಯಮಾಡುತ್ತೇನೆ. ಈಗಾಗಲೇ 6 ತಿಂಗಳಾದುವು, ಒಂದು ವರ್ಷವಾಯಿತು, ಸುಮಾರು 2 ವರ್ಷಗಳಿಂದಲೂ ಇನ್ನೂ ಅದರ ಬಗ್ಗೆ ನೆಗೋಷಿಯೇಷನ್ ಮಾಡುತ್ತಿದ್ದೇವೆಂದು ಅವರು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ಹನ್ನೆರಡೂವರೆ ಅಥವಾ 13 ಲಕ್ಷ ರೂಪಾಯಿ ಕೊಡುತ್ತೀರೋ ಅಥವಾ ಯಾವ ಬೆಲೆಗೆ ಅದನ್ನು ನೀವು ತೆಗೆದುಕೊಳ್ಳುತ್ತೀರೋ, ಆ ವಿಷಯವಾಗಿ ನಾನು ಹೇಳುವುದಿಲ್ಲ. ಈಗಲೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಪೀಲು ಮಾಡಿಕೊಳ್ಳುತ್ತೇನೆ. ಏಕೆಂದರೆ ಅದು ಇನ್ನೂ ಫೈನಲ್ ಆಗಿಲ್ಲ. ದಯವಿಟ್ಟು ಈಗಲೇ ಡ್ರಾಪ್ ಮಾಡಿ. ಸರ್ಕಾರದವರು 18–20 ಲಕ್ಷ ರೂಪಾಯಿಗಳನ್ನು ಪ್ರೈವೇಟ್ ಪಾರ್ಟಿಗೆ ಕೊಟ್ಟು ಆ ಒಂದು ಕಟ್ಟಡವನ್ನು ಕೊಂಡುಕೊಳ್ಳುವ ಅಗತ್ಯವಿಲ್ಲ. ಅದೇ 20 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿದರೆ, ಒಳ್ಳೆಯ ಜಾಗವಿದೆ, ಅಲ್ಲಿ ಅಂತಹ ಕಟ್ಟಡವನ್ನು ಕಟ್ಟಬಹುದು. 20 ಲಕ್ಷ ಖರ್ಚುಮಾಡಿದರೆ ಈಗ ಆ ಕಟ್ಟಡದಲ್ಲಿ ಎಷ್ಟು ಜನ ಹಿಡಿಸುತ್ತಾರೋ ಅವರೆ 4ರಷ್ಟು ಜನ ಹಿಡಿಯುವಂಥ ಕಟ್ಟಡವನ್ನು ಕಟ್ಟಿಸಬಹುದು. ಅದಕ್ಕೆ 5 ಎಕರೆ ಜಾಗ ಬೇಕಾಗಿಲ್ಲ. ಒಂದು ಎಕರೆಯಲ್ಲಿ ಬೇಕಾದಷ್ಟು ಜಾಗ ಇರುತ್ತದೆ. ಕಟ್ಟಬಹುದು. ಆದ್ದರಿಂದ ಇದು ಬಹಳ ಅನುಮಾನಕ್ಕೆ ಖಂಡಿತವಾಗಿ ಕಾರಣವಾಗಿದೆ. ನಾನು ಅವರ ಹೆಸರನ್ನು ಹೇಳುವುದಕ್ಕೆ ತಯಾರಾಗಿಲ್ಲ. ಯಾರ್ಯಾರು ಏನೇನು ಕೇಳಿದ್ದಾರೋ ಇದರ ಬಗ್ಗೆ ಎನ್ನುವುದು ಸುಮಾರು ಒಂದೂವರೆ ಅಥವಾ ಎರಡು ವರ್ಷಗಳಿಂದಲೂ ನಮಗೆ ಗೊತ್ತಾಗಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅಪೀಲು ಮಾಡುತ್ತೇನೆ. ಅವರು ಕಡೆಯ ಸಾರಿ ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದು ಸರಿಯಲ್ಲ. ಇದನ್ನು ಡ್ರಾಪ್‌ಮಾಡಿ ಅವರು ಹೋಗಲಿ ಎಂದು ನಾನು ಅಪೀಲ್ ಮಾಡುತ್ತೇನೆ.

Sri H. SIDDAVEERAPPA.—Will the Chief Minister kindly give some responsive statement in this behalf ?

Sri S. NIJALINGAPPA.—The concerned Minister has already said that he will examine. What more I can say ?

ಶ್ರೀ ಎಸ್. ಚನ್ನಯ್ಯ.—ತಾವು ಹೇಳಿದೆ ಅವರು ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಈ ರೀತಿ ಮಾಡಿ ಎಂದು ನೀವೇ ಅವರಿಗೆ ಹೇಳಿ. ಅದನ್ನು ಏಕೆ ಅವರೇ ತಿಳಿಸಬೇಕು ?

ಶ್ರೀ ಎಚ್. ಸಿದ್ಧವೀರಪ್ಪ.—ತಮ್ಮ ಅನುಭವದಲ್ಲಿ 6-7 ವರ್ಷಗಳು ಮುಖ್ಯ ಮಂತ್ರಿಗಳಾಗಿದ್ದವರು, ಗೌರ್ನಮೆಂಟ್ ಆರ್ಡರ್‌ಗಳನ್ನು ಇಷ್ಯೂ ಮಾಡುವ ಟೈಂನಲ್ಲಿ ಎಷ್ಟೋ ಸಾರಿ ಅವನ್ನು ಹಿಂದಕ್ಕೆ ತಂದು ರಿವೈಜ್ ಮಾಡಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—16 ಲಕ್ಷಕ್ಕೆ ಅವರೇ ಕೊಟ್ಟಿದ್ದಾರೆ, ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದ್ದಾರೆ.

Sri H. SIDDAVEERAPPA.—In any case even now you can give a positive assurance to this House.

Sri S. NIJALINGAPPA.—The point is that the Minister has stated that the matter will be examined, and therefore we are looking into that.

ಶ್ರೀ ಎಚ್. ಸಿದ್ಧವೀರಪ್ಪ.—ಹಾಗಿದ್ದರೆ, ಅದೆಲ್ಲವನ್ನೂ ಎಸ್ಟಿಮೇಟ್ ಕಮಿಟಿಗೆ ಹಾಕಿ. ಅವರೇ ಎಲ್ಲವನ್ನೂ ಕೂಲಂಕಷವಾಗಿ ಎಗ್ಸಾಮಿನ್ ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದನ್ನು ಹೇಗೆ ಬಿಟ್ಟುಬಿಡುವುದಕ್ಕಾಗುತ್ತದೆ ? ಇದೇನು ನಿಮ್ಮ ಮನೆ ದುಡ್ಡೇ.

Sri S. NIJALINGAPPA.—You cannot dictate.

Sri S. SIVAPPA.—It is a clear case. Your own Chief Engineer has estimated it and the same Chief Engineer has changed his attitude within three months. What more do you want ? ಇದಕ್ಕಿಂತ ಬೇರೆ ಇನ್ನು ಯಾವುದು ಬೇಕಾಗಿದೆ ? ಇದರಲ್ಲಿ ನಿಮ್ಮನ್ನು ನಂಬುವುದಕ್ಕಾಗುವುದಿಲ್ಲ.

Sri H. SIDDAVEERAPPA.—Sir, before you give your ruling I request you to withhold your ruling and examine all the previous statements made and the statement now made. On the day on which the Hon'ble Minister made the statement it is quite possible that he never referred to this matter. He gave it as though he was defending the Government and he was guided by the report of the officers. Anyhow, I will request you to examine all these facts first, and then give your ruling.

Mr. DEPUTY SPEAKER.—I know the allegations that have been made and I have heard the Hon'ble Minister also. I will come to the conclusion whether it is in order or not.

